# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶುಕ್ರವಾರ, ನವೆಂಬರ್ 22, 2024

ಸಂಪುಟ : 51 ಸಂಚಿಕೆ : 189 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ತಕ್ಷಣವೇ ಗುಂಡಿ ಮುಚ್ಚಿಸಲು ಮೇಯರ್ ತಾಕೀತು

### ಪಾಲಿಕೆ ಸಾಮಾನ್ಯ ಸಭೆಯಲ್ಲಿ 'ಗುಂಡಿ' ವಾಕ್ಸಮರ, ಹಂದಿ-ನಾಯಿ ಹಾವಳಿ ಪ್ರಸ್ತಾಪ



ದಾವಣಗೆರೆ, ನ.21- ನಗರದ ರಸ್ತೆಗಳಲ್ಲಿರುವ ಗುಂಡಿಗಳ ಬಗ್ಗೆ ಗುರುವಾರ ನಡೆದ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ತೀವ್ರ ಚರ್ಚೆ ನಡೆಯಿತು. ಚರ್ಚೆ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಕ್ಸಮರಕ್ಕೂ ಕಾರಣವಾಯಿತು.

ಸಭೆಯ ಆರಂಭದಲ್ಲಿಯೇ ವಿಪಕ್ಷ ನಾಯಕ ಕೆ.ಪ್ರಸನ್ನ ಕುಮಾರ್ ಶೂನ್ಯ ಅವಧಿಯಲ್ಲಿ ಸಮಸ್ಯೆಗಳ ಕುರಿತು ಪ್ರಸ್ತಾಪಿಸಲು ಅನುಮತಿ ಕೇಳಿದರು. ಮೇಯರ್ ಒಪ್ಪಿಗೆ ನೀಡುತ್ತಿದ್ದಂತೆ, ರಸ್ತೆಯಲ್ಲಿ ಗುಂಡಿ ಕುರಿತು 'ಜನತಾವಾಣಿ'ಯಲ್ಲಿ ಪ್ರಕಟವಾಗಿದ್ದ ಸುದ್ದಿ ಪ್ರದರ್ಶಿಸುತ್ತಾ, ಮಾಧ್ಯಮಗಳಲ್ಲಿ ಗುಂಡಿಗಳ ಬಗ್ಗೆ ವರದಿಯಾಗಿ ತಿಂಗಳಾದರೂ ಗುಂಡಿ ಮುಚ್ಚಿಸಿಲ್ಲ ಎಂದು ಆರೋಪಿಸಿದರು.

ಕಳೆದ ಸಾಮಾನ್ಯ ಸಭೆಯಲ್ಲಿಯೇ 20 ದಿನಗಳಲ್ಲಿ ಗುಂಡಿಗಳನ್ನು ಮುಚ್ಚಿಸುವುದಾಗಿ ಭರವಸೆ ನೀಡಲಾಗಿತ್ತು. ಆದರೆ ತಿಂಗಳಾದರೂ ಗುಂಡಿಗಳು ಹಾಗೆಯೇ ಇವೆ ಎಂದಾಗ, ಇದಕ್ಕೆ ಸದಸ್ಯರಾದ ಕೆ.ಎಂ. ವೀರೇಶ್, ಶಿವಾನಂದ ಪಾಟೀಲ್ ದನಿಗೂಡಿಸಿದರು.

ಪಾಲಿಕೆ ಸದಸ್ಯ ಎ.ನಾಗರಾಜ್, ಪಾಲಿಕೆ ವ್ಯಾಪ್ತಿಯಲ್ಲಿನ ಬಹುತೇಕ ಗುಂಡಿಗಳನ್ನು ಮುಚ್ಚಿಸಲಾಗಿದೆ. ಕೆಲವು ರಸ್ತೆಗಳು ಪಿಡಬ್ಲ್ಯೂಡಿ ವ್ಯಾಪ್ತಿಯಲ್ಲಿವೆ. ಪ್ರಚಾರ ಪಡೆಯಲು ಪತ್ರಿಕೆ ಹಿಡಿದು ಆರೋಪಿಸುವುದು ಸರಿಯಲ್ಲ ಎಂದರು. ಗಡಿಗುಡಾಳ್ ಮಂಜುನಾಥ್, ಜಲಸಿರಿ ಕಾಮಗಾರಿ ನಡೆಯುತ್ತಿರುವುದರಿಂದ ಹಲವು ರಸ್ತೆಗಳಲ್ಲಿ ಗುಂಡಿಗಳಾಗುತ್ತಿವೆ ಎಂದಾಗ ವಿಪಕ್ಷ ಹಾಗೂ ಆಡಳಿತ ಪಕ್ಷದ ಸದಸ್ಯರ ನಡುವೆ ವಾಗ್ವಾದ ನಡೆಯಿತು.

ಪಾಲಿಕೆ ಅಭಿಯಂತರರು ಮಾತನಾಡಿ, ಪತ್ರಿಕೆಯಲ್ಲಿ ಬಂದ ಗುಂಡಿ ರಸ್ತೆಗಳಲ್ಲಿ ಅನೇಕ ರಸ್ತೆಗಳು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಿಸಿದ್ದು ಅವರಿಗೆ ಲಿಖಿತವಾಗಿ ತಿಳಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಟೆಂಡರ್ ಕರೆದು ಗುಂಡಿ ಮುಚ್ಚಿಸಲು ಆರಂಭಿಸಿದಾಗ ಮತ್ತೆ ಮಳೆ ಬಂತು. ನಂತರ ಗುತ್ತಿಗೆದಾರ ಅಕಾಲಿಕ ಮರಣ ಹೊಂದಿದ. ಈಗ ಮತ್ತೆ ಟೆಂಡರ್ ಕರೆಯಲಾಗಿದೆ ಎಂದರು. ಮೇಯರ್ ಚಮನ್ ಸಾಬ್ ಮಾತನಾಡಿ, ವಾರದೊಳಗೆ ಗುಂಡಿ ಮುಚ್ಚಿಸಲು ಕ್ರಮ ಕೈಗೊಳ್ಳಿ ಎಂದು ತಾಕೀತು ಮಾಡಿದರು.

ನಗರದಲ್ಲಿ ನಾಯಿ, ಹಂದಿ ಕಾಟ ಹೆಚ್ಚಾಗಿದೆ. ಅದನ್ನು ನಿಯಂತ್ರಿಸಬೇಕು. ಒಂದಿಷ್ಟು ದಿನ ನಗರದಲ್ಲಿ ಹಂದಿ ಕಾಟ ಕಡಿಮೆಯಾಗಿತ್ತು. ಈಗ ಮತ್ತೆ ಹಂದಿಗಳು ಕಾಣುತ್ತಿವೆ ಎಂದು ಸದಸ್ಯ ಶಿವಾನಂದ್ ಆರೋಪಿಸಿದರು.

ಕಾಂಗ್ರೆಸ್ ಸದಸ್ಯ ಎ. ನಾಗರಾಜ್ ಮಾತನಾಡಿ, ವಿವಿಧ ಕಾರಣಗಳಿಂದಾಗಿ ನಗರದಲ್ಲಿ ಹಂದಿ ಕಾಟ ಕಡಿಮೆ (4ನೇ ಪುಟಕ್ಕೆ)

### ವಾರ್ಡ್ ರೌಂಡ್ಸ್ ಮತ್ತೆ ಆರಂಭ: ಚಮನ್ ಸಾಬ್



ವಾರ್ಡ್‌ಗಳಿಗೆ ಭೇಟಿ ನೀಡಿದಾಗ ಜನರ ಸಮಸ್ಯೆ ಬಗೆಹರಿಸಲು ನಿಮ್ಮಿಂದ ಆಗುವುದಾದರೆ ಮಾತ್ರ ವಾರ್ಡ್‌ಗಳಿಗೆ ಭೇಟಿ ಕೊಡಿ. ಇಲ್ಲದಿದ್ದರೆ ನಿಮ್ಮ ಗೌರವ ಕಡಿಮೆಯಾಗುತ್ತದೆ ಎಂದು ಪಾಲಿಕೆ ಮಾಜಿ ಮೇಯರ್ ವಿನಾಯಕ ಪೈಲ್ವಾನ್, ಮೇಯರ್ ಚಮನ್ ಸಾಬ್ ಅವರನ್ನುದ್ದೇಶಿಸಿ ಹೇಳಿದರು.

ಪಾಲಿಕೆಯಲ್ಲಿ ದಪ್ಪ ಚರ್ಮದ ಅಧಿಕಾರಿಗಳಿದ್ದಾರೆ. ಅವರಿಗೆ ಜನರ ಸಮಸ್ಯೆಗಳು ತಿಳಿಯಬೇಕಿದೆ. ಈ ಹಿನ್ನೆಲೆಯಲ್ಲಿಯೇ ಅಧಿಕಾರಿಗಳೊಂದಿಗೆ ವಾರ್ಡ್ ಗಳಿಗೆ ಭೇಟಿ ನೀಡಲಾಗುತ್ತಿದೆ. ವಾರ್ಡ್ ಭೇಟಿಗೆ ಆಯುಕ್ತರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ ಎಂದು ಚಮನ್ ಸಾಬ್ ಹೇಳಿದರು.

ಈಗಾಗಲೇ ಹಲವು ವಾರ್ಡ್‌ಗಳಿಗೆ ಭೇಟಿ ನೀಡಿದ್ದೇನೆ. ರಾಜ್ಯೋತ್ಸವದ ತಯಾರಿ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ವಾರ್ಡ್ ಭೇಟಿ ಸ್ಥಗಿತಗೊಳಿಸಲಾಗಿದ್ದು, ರಾಜ್ಯೋತ್ಸವ ಕಾರ್ಯಕ್ರಮದ ನಂತರ ಮತ್ತೆ ವಾರ್ಡ್‌ಗಳಿಗೆ ಭೇಟಿ ನೀಡಲಾಗುವುದು ಎಂದರು.

ಹಣದ ಕೊರತೆ ನಡುವೆಯೂ ನಾನು ಅಧಿಕಾರಕ್ಕೆ ಬಂದ ಮೇಲೆ 3 ಕೋಟಿ ರೂ ಟೆಂಡರ್ ಕರೆಯಲಾಗಿದೆ. ವಾರ್ಡ್ ಭೇಟಿ ವೇಳೆ ಹಲವಾರು ಸಮಸ್ಯೆಗಳ ಬಗ್ಗೆ ತಿಳಿಯುತ್ತದೆ. ತುರ್ತು ಕಾಮಗಾರಿಗಳಿಗಾಗಿ ಹಣ ಬೇಕಾಗುತ್ತದೆ. ಹೀಗಾಗಿ ಹಣ ಮೀಸಲಿಗೆ ಕೌನ್ಸಿಲ್ ಅನುಮತಿಗೆ ವಿಷಯ ಪ್ರಸ್ತಾಪಿಸಲಾಗುವುದು ಎಂದರು.

## ಅರ್ಹರ ಬಿಪಿಎಲ್ ಚೀಟಿ ಹಿಂತಿರುಗಿಸಿ

**ಅಧಿಕಾರಿಗಳಿಗೆ ಸರ್ಕಾರ ಆದೇಶ**

ಬೆಂಗಳೂರು, ನ. 21 - ರದ್ದಾದ ಅರ್ಹರ ಬಿಪಿಎಲ್ ಪಡಿತರ ಚೀಟಿ ಹಿಂತಿರುಗಿಸುವಂತೆ ಸರ್ಕಾರ ಆದೇಶಿಸಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ, ಬಡತನ ರೇಖೆಗಿಂತ ಕೆಳಗಿನ ಕುಟುಂಬದವರ ಬಿಪಿಎಲ್ ಚೀಟಿಯನ್ನು ಎಪಿಎಲ್‌ಗೆ ಪರಿವರ್ತಿಸಿದ್ದರೆ, ಅಂತಹ ಕಾರ್ಡ್‌ಗಳನ್ನು ಪುನರ್ ಸ್ಥಾಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಪಡಿತರ ಚೀಟಿ ನೀಡಿಕೆ ಮಾನದಂಡದ ಅನ್ವಯ ಪರಿಶೀಲನೆ ವೇಳೆ ಅನರ್ಹವೆಂದು ಕಂಡುಬಂದ ಬಿಪಿಎಲ್ ಪಡಿತರ ಚೀಟಿಗಳನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ ಎಂದು ಹೇಳಿದರು.

ಸರ್ಕಾರಿ ನೌಕರರು ಮತ್ತು ಆದಾಯ ತೆರಿಗೆ ಪಾವತಿದಾರರೂ ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿದ್ದರು, ಅಂತಹವರನ್ನು ಪತ್ತೆ ಹಚ್ಚಿ ಎಪಿಎಲ್‌ಗೆ ಪರಿವರ್ತಿಸಲಾಗಿದೆ. ಇಂತಹ ಸಂದರ್ಭದಲ್ಲಿ ಅರ್ಹರ ಬಿಪಿಎಲ್ ಚೀಟಿ ಪರಿವರ್ತನೆಗೊಂಡಿದ್ದರೆ, ಅಂತಹವರಿಗೆ ಮತ್ತೆ ಬಿಪಿಎಲ್ ಚೀಟಿಗಳನ್ನು ತ್ವರಿತವಾಗಿ ವಿತರಿಸಲಾಗು ವುದು ಎಂದು ಹೇಳಿದರು.

2011ರ ಜನಗಣತಿ ಪ್ರಕಾರ ಕರ್ನಾಟಕ ನಗರ ಮತ್ತು ಗ್ರಾಮೀಣ ಜನಸಂಖ್ಯೆ ಸೇರಿ ಶೇಕಡ 65.96ರಷ್ಟು ಬಿಪಿಎಲ್ ಕಾರ್ಡ್‌ಗಳು ವಿತರಣೆಯಾಗಿವೆ.

ಇದರಲ್ಲಿ ಅನರ್ಹರು ದೊಡ್ಡ ಪ್ರಮಾಣದಲ್ಲಿ ಬಿಪಿಎಲ್ ಚೀಟಿಗಳನ್ನು ಪಡೆದಿರುವುದು ನಮ್ಮ ಹೆಚ್‌ಆರ್‌ಎಂಎಸ್ ತಂತ್ರಾಂಶದಿಂದ ತಿಳಿದು ಬಂದಿದೆ.

ಇದೇ ಮಾನದಂಡವನ್ನು ಆಧಾರವಾಗಿಟ್ಟುಕೊಂಡು ನಾವು ಅನರ್ಹರ ಕಾರ್ಡ್‌ಗಳನ್ನು ಪರಿವರ್ತನೆ ಮಾಡುತ್ತಿದ್ದೇವೆ ಎಂದು ಸಚಿವರು ಹೇಳಿದರು.

ಕೇಂದ್ರ ಸರ್ಕಾರ ಕೂಡ ಕರ್ನಾಟಕದಲ್ಲಿ ಆದಾಯ ಮಿತಿ ಹೆಚ್ಚಿದೆ, ಇಷ್ಟಾದರೂ ನೀವು ಬಿಪಿಎಲ್ ಕಾರ್ಡ್‌ಗಳನ್ನು ಯಥೇಚ್ಛವಾಗಿ ನೀಡಿದ್ದು, ಅದನ್ನು ಪುನರ್ ಪರಿಶೀಲಿಸಬೇಕು ಮತ್ತು (4ನೇ ಪುಟಕ್ಕೆ)

## ನಬಾರ್ಡ್ ಆರ್ಥಿಕ ನೆರವು ಹೆಚ್ಚಿಸಲು ಕೇಂದ್ರಕ್ಕೆ ಮನವಿ

**ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಲು ಸೀತಾರಾಮನ್‌ಗೆ ಸಿದ್ದರಾಮಯ್ಯ ಆಗ್ರಹ**

ಬೆಂಗಳೂರು, ನ. 21 - ಆರ್‌ಬಿಐ ಮತ್ತು ನಬಾರ್ಡ್ ಸಂಸ್ಥೆಗಳಿಗೆ ಸೂಚನೆ ನೀಡಿ ಕರ್ನಾಟಕದ ರೈತರಿಗೆ ಆಗಿರುವ ಸಾಲದ ಹೊರೆ ಸರಿಪಡಿಸಿ ಅನ್ಯಾಯ ಸರಿದೂಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ರೈತರಿಗೆ ಸಹಕಾರ ಬ್ಯಾಂಕ್‌ಗಳ ಮೂಲಕ ಸಾಲ ನೀಡಲು ನಬಾರ್ಡ್ ನೀಡುತ್ತಿದ್ದ ಆರ್ಥಿಕ ನೆರವಿನ ಪ್ರಮಾಣ ಕಡಿಮೆ ಮಾಡಿದ್ದು, ಇದರಿಂದ ರಾಜ್ಯದ ರೈತರು ಸಂಕಷ್ಟಕ್ಕೆ ಸಿಲುಕಲಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಕಳೆದ ವರ್ಷ ನಬಾರ್ಡ್ ಕರ್ನಾಟಕಕ್ಕೆ 5,600 ಕೋಟಿ ರೂ. ಆರ್ಥಿಕ ನೆರವು ನೀಡಿತ್ತು, ಈ ಬಾರಿ ಅದನ್ನು 2,340 ಕೋಟಿ ರೂ.ಗಳಿಗೆ ಇಳಿಕೆ ಮಾಡಿದೆ. ಇದರಿಂದ ರಾಜ್ಯಕ್ಕೆ ದೊಡ್ಡ ಅನ್ಯಾಯವಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನಿಯೋಗವು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಪತ್ರ ಸಲ್ಲಿಸಿ, ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸುವಂತೆ ಮನವಿ ಮಾಡಿದರು.

2024-25ನೇ ಸಾಲಿನಲ್ಲಿ 9,162 ಕೋಟಿ ರೂ. ರಿಯಾಯಿತಿ ಸಾಲ ಮಿತಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ನಬಾರ್ಡ್ 2,340 ಕೋಟಿ ರೂ.ಗಳಿಗೆ ಮಾತ್ರ ಅನುಮೋದನೆ ನೀಡಿದೆ. ಇದು ಕಳೆದ ವರ್ಷಕ್ಕಿಂತಲೂ ಶೇ.58 ರಷ್ಟು ಕಡಿಮೆಯಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಆರ್.ಬಿ.ಐ. ಸಾಮಾನ್ಯ ಸಾಲ ನೀತಿ ಕಡಿಮೆ ಮಾಡಿರುವುದರಿಂದಾಗಿ ಪ್ರಸಕ್ತ ವರ್ಷದ ರಿಯಾಯಿತಿ ದರದ ಸಾಲ ಮಿತಿಯನ್ನೂ ಕಡಿತ (4ನೇ ಪುಟಕ್ಕೆ)



## ವಕ್ಫ್ ಸಮಿತಿಯ ಕರಡು ವರದಿ ಸಿದ್ಧ

ನವದೆಹಲಿ, ನ. 21 – ವಕ್ಫ್ ಕುರಿತು ರೂಪಿಸಲಾದ ಸಂಸದೀಯ ಸಮಿತಿಯ ಕರಡು ವರದಿ ಸಿದ್ಧವಾಗಿದೆ ಎಂದು ಸಮಿತಿ ಅಧ್ಯಕ್ಷ ಜಗದಂಬಿಕಾ ಪಾಲ್ ಹೇಳಿದ್ದಾರೆ.

ಸಮಿತಿಯ ಅವಧಿ ನವೆಂಬರ್ 29ರಂದು ಪೂರ್ಣವಾಗಲಿದೆ. ಇನ್ನಷ್ಟು ಚರ್ಚೆ ನಡೆಸಲು ಸಮಿತಿಯ ಅವಧಿ ವಿಸ್ತರಿಸಬೇಕು ಎಂದು ಪ್ರತಿಪಕ್ಷಗಳ ಸದಸ್ಯರು ಒತ್ತಾಯಿಸಿದ್ದರು.

ಕರಡು ವರದಿ ಸಿದ್ಧವಾಗಿದೆ. ಶೀಘ್ರದಲ್ಲೇ ಶಿಫಾರಸ್ಸಿನ ಒಂದೊಂದೇ ಅಂಶದ ಚರ್ಚೆಗೆ ದಿನಾಂಕ ನಿಗದಿಪಡಿಸಲಾಗುವುದು ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಪಾಲ್ ತಿಳಿಸಿದ್ದಾರೆ.

ಆದರೆ, ಸಮಿತಿಯ ಅವಧಿಯನ್ನು ಸೀಮಿತವಾಗಿ ವಿಸ್ತರಿಸುವ ಸಾಧ್ಯತೆ ಇದೆ. ಬೃಹತ್ ವರದಿಯ ಔಪಚಾರಿಕತೆ ಪೂರ್ಣಗೊಳಿಸಲು ಸಮಯ ಬೇಕಾಗಲಿದೆ ಎಂದು ಮೂಲಗಳು ತಿಳಿಸಿವೆ.

## ಮಹಿಳೆಯರೇ ಮಹಿಳಾ ಮೀಸಲಾತಿ ವಿರೋಧಿಸಿದ್ದರು

**ತುಮಕೂರು ವಿ.ವಿ. ಸಹ ಪ್ರಾಧ್ಯಾಪಕ ಕೆ.ಸಿ. ಸುರೇಶ್**

ದಾವಣಗೆರೆ, ನ. 21 - ದೇಶಕ್ಕೆ ಸ್ವಾತಂತ್ರ್ಯ ದೊರೆಯುವ ಮೊದಲೇ ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ಪ್ರಸ್ತಾಪಿಸಲಾಗಿತ್ತು. ಆದರೆ, ಮಹಿಳೆಯರೇ ಮೀಸಲಾತಿಯನ್ನು ವಿರೋಧಿಸಿದರು ಎಂದು ತುಮಕೂರು ವಿಶ್ವವಿದ್ಯಾಲಯದ ಸಂಯೋಜಕ ಹಾಗೂ ಸಹ ಪ್ರಾಧ್ಯಾಪಕ ಕೆ.ಸಿ. ಸುರೇಶ್ ಹೇಳಿದರು.

ಎ.ವಿ.ಕೆ. ಕಾಲೇಜಿನಲ್ಲಿ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ 'ಮಹಿಳೆಯರ ರಾಜಕೀಯ ಸಬಲೀಕರಣ : ಮಹಿಳಾ ಮಸೂದೆ ವಿಶ್ಲೇಷಣೆ' ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

1946ರಲ್ಲಿ ಸಂವಿಧಾನ ರಚನಾ ಸಮಿತಿ ರೂಪಿಸಿದಾಗ ಅದರಲ್ಲಿ 15 ಮಹಿಳೆಯರಿದ್ದರು. ಆ ಸಂದರ್ಭದಲ್ಲಿ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ಪ್ರಸ್ತಾಪಿಸಲಾಗಿತ್ತು. ಆದರೆ, 15 ಮಹಿಳೆಯರೂ ಮೀಸಲಾತಿ ಪ್ರಸ್ತಾಪ ವಿರೋಧಿಸಿದರು ಎಂದು ಸುರೇಶ್ ತಿಳಿಸಿದರು.

ಮಹಿಳೆಯರನ್ನು ಅಬಲೆಯರಾಗಿ ನೋಡಬಾರದು. ಮಹಿಳೆಯರು ಹಾಗೂ ಪುರುಷರನ್ನು ಸಮಾನವಾಗಿ ಕಾಣಬೇಕಿದೆ. ಹೀಗಾಗಿ ಮೀಸಲಾತಿ ವಿರೋಧಿಸುವುದಾಗಿ ಮಹಿಳೆಯರು ವಾದ ಮಂಡಿಸಿದ್ದರು. ಇದರಿಂದಾಗಿ ಮಹಿಳಾ ಮೀಸಲಾತಿ ಪ್ರಸ್ತಾಪ ಕೈ ಬಿಡಲಾಯಿತು ಎಂದವರು ಹೇಳಿದರು.

ಆದರೆ, ಸ್ವಾತಂತ್ರ್ಯ ಸಿಕ್ಕ ನಂತರ ಮಹಿಳೆಯರಿಗೆ ಶಾಸನಸಭೆಗಳಲ್ಲಿ ಸಮರ್ಪಕ ಪ್ರಾತಿನಿಧ್ಯ ಸಿಗಲೇ ಇಲ್ಲ. 1971ರಲ್ಲಿ ಪಂಚಾಯ್ತಿಗಳಿಂದ ಹಿಡಿದು ಪಾರ್ಲಿಮೆಂಟಿನವರೆಗೂ ಮಹಿಳೆಯರ ಪ್ರಾತಿನಿಧ್ಯ ಕೇವಲ ಶೇ.10ರಷ್ಟಿತ್ತು. ಹೀಗಾಗಿ (4ನೇ ಪುಟಕ್ಕೆ)

## ಲಂಚದ ಸುಳಿಯಲ್ಲಿ ಸಿಲುಕಿದ ಅದಾನಿ

### ಭಾರತೀಯ ಅಧಿಕಾರಿಗಳಿಗೆ 265 ದಶಲಕ್ಷ ಡಾಲರ್ ಲಂಚ ನೀಡಿದ್ದಾಗಿ ಅಮೆರಿಕ ನ್ಯಾಯಾಲಯದಲ್ಲಿ ದೋಷಾರೋಪ




ನವದೆಹಲಿ, ನ. 21 – ಸೌರ ವಿದ್ಯುತ್ ಗುತ್ತಿಗೆಗಳನ್ನು ಪಡೆಯಲು ಭಾರತದ ಅಧಿಕಾರಿಗಳಿಗೆ 265 ದಶಲಕ್ಷ ಡಾಲರ್ (2,200 ಕೋಟಿ ರೂ.) ಲಂಚ ನೀಡಿದ ಆರೋಪದ ಮೇಲೆ ಉದ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕದ ಪ್ರಾಸಿಕ್ಯೂಟರ್‌ಗಳು ಪ್ರಕರಣ ದಾಖಲಿಸಿದ್ದಾರೆ.

ಅದಾನಿ ಹಾಗೂ ಅವರ ಸಂಬಂಧಿ ಸಾಗರ್ ಸೇರಿದಂತೆ ಏಳು ಜನರು ಆಂಧ್ರ ಪ್ರದೇಶ ಹಾಗೂ ಒಡಿಶಾ ಅಧಿಕಾರಿಗಳಿಗೆ ಲಂಚ ನೀಡಿದ್ದರು. 20 ವರ್ಷಗಳ ಅವಧಿಗೆ ದುಬಾರಿ ಬೆಲೆಯಲ್ಲಿ ವಿದ್ಯುತ್ ಖರೀದಿಸಲು ಈ ಲಂಚ ನೀಡಲಾಗಿತ್ತು ಎಂದು ಆರೋಪಿಸಲಾಗಿದೆ.

ಈ ಪ್ರಕರಣ ಅದಾನಿ ಸಮೂಹಕ್ಕೆ ಆಘಾತ ನೀಡಿದೆ. ಆರೋಪ ಸಾಬೀತಾಗುವವರೆಗೂ ಅದಾನಿ ನಿರಪರಾಧಿ ಎಂದು ಪರಿಗಣಿಸಲಾಗಿದೆ. ಆದರೆ, ಪ್ರಕರಣದಿಂದ ಅದಾನಿ ಸಮೂಹದ ವರ್ಚಸ್ಸಿಗೆ ಧಕ್ಕೆಯಾಗಲಿದೆ. ಅಮೆರಿಕದ ಮಾರುಕಟ್ಟೆಯಿಂದ ಹಣ ಪಡೆಯಲು ಸಾಧ್ಯವಾಗುವುದಿಲ್ಲ. ವಿದೇಶ ಪ್ರಯಾಣದ ಮೇಲೆ ನಿರ್ಬಂಧ ಹೇರಬೇಕಾಗುತ್ತದೆ. ಪ್ರತಿಪಕ್ಷಗಳು ಸರ್ಕಾರದ ಮೇಲೆ ದಾಳಿ ನಡೆಸಲು ಹೊಸ ಅಸ್ತ್ರ ಸಿಕ್ಕಂತಾಗಿದೆ.

20 ವರ್ಷಗಳಲ್ಲಿ 2 ಶತಕೋಟಿ ಡಾಲರ್‌ಗಳಿಗೂ ಹೆಚ್ಚು ಲಾಭ ಪಡೆಯಲು ಆಂಧ್ರ ಪ್ರದೇಶ ಹಾಗೂ ಒಡಿಶಾ ಸರ್ಕಾರಿ ಅಧಿಕಾರಿಗಳಿಗೆ ಅದಾನಿ ಲಂಚ ನೀಡಿರುವುದಾಗಿ ಅಮೆರಿಕದ ನ್ಯಾಯ ಇಲಾಖೆ ಆರೋಪಿಸಿದೆ.

2022ರಲ್ಲಿ ಅಮೆರಿಕ ಈ ಬಗ್ಗೆ (4ನೇ ಪುಟಕ್ಕೆ)

# ತಮ್ಮ ಬರವಣಿಗೆಯಿಂದ ಜನರ ಬದುಕು ಕಟ್ಟಿಕೊಟ್ಟವರು ವಚನಕಾರರು




**ಹೊನ್ನಾಳಿಯ ಕಸಾಪ ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಎಂ. ಆರ್. ಲೋಕೇಶ್**

ಹೊನ್ನಾಳಿ, ನ. 21 - ಜನರು ಬದುಕು ಕಟ್ಟಿಕೊಳ್ಳಲು ಬರೆದವರು ವಚನಕಾರರು. ಈ ದೃಷ್ಟಿಯಿಂದಾಗಿ ಜನರಿಗೆ ಹತ್ತಿರವಾಗಿರುವವರು. ಸರಳತೆಯ ವಚನ ಧರ್ಮ ವಿಶ್ವ ಸಾಹಿತ್ಯಕ್ಕೆ ಕೊಡುಗೆ ನೀಡುವ ಮೂಲಕ ನಿಜವಾದ ಧರ್ಮವಾಗಿ ಪ್ರಭಾವ ಬೀರಿದೆ ಎಂದು ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಎಂ.ಆರ್. ಲೋಕೇಶ್ ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ವಿಜಯ ಪದವಿ ಪೂರ್ವ ಕಾಲೇಜುಗಳ ಆಶ್ರಯದಲ್ಲಿ ನಡೆದ 'ವಚನ ಸಾಹಿತ್ಯದಲ್ಲಿ ವೈಚಾರಿಕತೆ' ಎಂಬ ವಿಷಯವಾಗಿ ಉಪನ್ಯಾಸವನ್ನು ಉದ್ದೇಶಿಸಿ ಅವರು ಮಾತನಾಡಿದರು.

ವಚನಕಾರರು ಮೌಲ್ಯವನ್ನು ವಿರೋಧಿಸಿದ್ದು, ಬದುಕಿನ ಅರಿವು-ತಿಳುವಳಿಕೆ ಮೂಡಿಸುವ ಪ್ರಯತ್ನ ಮಾಡಿರುವರು. ಅತ್ಯಾಚಾರ-ಭ್ರಷ್ಟಾಚಾರದಂತಹ ಅನಿಷ್ಟಗಳು ಸಂದರ್ಭದಲ್ಲಿ ತಾಂಡವ ಆಡುತ್ತಿರುವ ಪ್ರಸ್ತುತ ದಿನಗಳಲ್ಲಿ ಸಜ್ಜನರ ಬದುಕು ಹಲವಾರು ಪ್ರಶ್ನೆಗಳ ಎದುರಾಗುವಂತೆ ಮಾಡಿವೆ ಎಂಬುದಾಗಿ ವಿವರಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಬಿ.ಎಂ. ಸದಾಶಿವಪ್ಪ ಮಾತನಾಡಿ, ತಾವು ಜಿಲ್ಲಾ ಕಸಾಪ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಜಿಲ್ಲೆಯಲ್ಲಿ 43 ದತ್ತಿಗಳಿದ್ದವು. ಜಿಲ್ಲಾಧ್ಯಕ್ಷರಾದ ನಂತರದ ದಿನಗಳಲ್ಲಿ 170ಕ್ಕೆ ಹೆಚ್ಚು ದತ್ತಿಗಳನ್ನಾಗಿ ಮಾಡಲಾಗಿತ್ತು. ರಾಜ್ಯದ ಎಲ್ಲಾ ಜಿಲ್ಲೆಗಳಿಗಿಂತ ದಾವಣಗೆರೆಯು ದತ್ತಿಯನ್ನು ಸ್ಥಾಪಿಸುವಲ್ಲಿ ಅಗ್ರಸ್ಥಾನದಲ್ಲಿದೆ. ಜಿಲ್ಲಾಧ್ಯಕ್ಷರಾಗಿದ್ದ ಅವಧಿಯಲ್ಲಿ ಬಹಳ ಯಶಸ್ವಿಯಾಗಿ ಜಿಲ್ಲಾ ಸಮ್ಮೇಳನ ಹೊನ್ನಾಳಿ ತಾಲ್ಲೂಕು ಪರಿಷತ್ತು ಮಾಡಿದ್ದನ್ನು ಸ್ಮರಿಸಿದರು.

ತಾಲ್ಲೂಕು ಕಸಾಪ ಅಧ್ಯಕ್ಷ ಮುರಿಗೆಪ್ಪಗೌಡ ಮಾತನಾಡಿ, ರಾಜ್ಯ ಕಸಾಪ ಅಧ್ಯಕ್ಷರಾಗಿರುವ ಮಹೇಶ್ ಜೋಷಿ ನೇತೃತ್ವದಲ್ಲಿ ಒಂದು ಕೋಟಿ ಸದಸ್ಯರ ನಿರೀಕ್ಷೆ ಹೊಂದಿದ್ದು, 109 ವರ್ಷಗಳು ಗತಿಸಿರುವ ಪರಿಷತ್ತು ಈಗಾಗಲೇ 4 ಲಕ್ಷ ಸದಸ್ಯತ್ವ ದಾಟಿದೆ. ನಾಡಿನ ಜನರಲ್ಲಿ ದತ್ತಿಗಳ ಮೂಲಕ ಸಾಹಿತ್ಯಕ್ಕೆ ಹೆಚ್ಚು ಒಲವು ಮೂಡಿಸುವಂತೆ ಮಾಡಲಾಗುತ್ತಿದೆ ಎಂದರು.

ದತ್ತಿದಾನಿ ದಾವಣಗೆರೆ ಶಾಂತರಾಜ್ ಮಾತನಾಡಿ, ಕಾಯಕ ನಿಷ್ಠೆ ಹಾಗೂ ದಾಸೋಹದ ನಿಷ್ಠೆಯಿಂದಾಗಿ ಮಾಗನೂರ್ ಬಸಪ್ಪನವರು ಶತಮಾನದ ಜಿಲ್ಲಾ ಶ್ರೇಷ್ಠ ವ್ಯಕ್ತಿಯಾಗಿದ್ದಾರೆ ಎಂದರು.

ಕೋಟೆಹಾಳ್ ಬಸಮ್ಮ ಹಂಪೋಳ್ ಶಿವಪ್ಪ, ಮಾಗನೂರು ಬಸಪ್ಪ, ಕುಂಕೋದ್ ಚನ್ನಬಸಮ್ಮ, ಕತ್ತಿಗೆ ನಾಗಮ್ಮ, ನಾಗಪ್ಪ, ಬಸವರಾಜಪ್ಪ ಹೆಸರಿನ ಮೂರು ದತ್ತಿಗಳು ನಡೆದವು.

ಸಭೆಯ ಅಧ್ಯಕ್ಷತೆಯನ್ನು ಚಿಗುರು ಸಂಸ್ಥೆಯ ನಿರ್ದೇಶಕ ಸುನಿಲ್ ಕುಮಾರ್ ವಹಿಸಿದ್ದರು. ಉದ್ಘಾಟನೆಯನ್ನು ಜಿಲ್ಲಾ ನಿವೃತ್ತ ಕಾರ್ಯ ಪಾಲಕ ಎಚ್. ಎಸ್. ಬಸವರಾಜಪ್ಪ ನೆರವೇರಿಸಿದರು.

ನಾಗರಾಜ್ ನಾಯಕ್ ಚಿಗುರು ಸಂಸ್ಥೆಯ ದೇವರಾಜ್ ಕಸಾಪ ಮಾಜಿ ಅಧ್ಯಕ್ಷ ರೇವಣಪ್ಪ ಇನ್ನಿತರರಿದ್ದರು. ಎಂ. ಚಿನ್ಮಯ್ ಪಾಟೀಲ್ ಪ್ರಾರ್ಥಿಸಿ, ಕೆ. ಶೇಖರಪ್ಪ ಸ್ವಾಗತಿಸಿ, ಶಾರದಾ ಕಣಗೊಟಗಿ ನಿರೂಪಿಸಿ ಕತ್ತಿಗಿ ನಾಗರಾಜ ವಂದಿಸಿದರು.

## ಬಿಪಿಎಲ್ ಅರ್ಹರಿಗೆ ಅನ್ಯಾಯವಾಗಲು ಬಿಡುವುದಿಲ್ಲ : ಡಿಕೆಶಿ

ಬೆಂಗಳೂರು, ನ. 21 - ಯಾವುದೇ ಕಾರಣಕ್ಕೂ ಬಿಪಿಎಲ್ ಅರ್ಹರಿಗೆ ಅನ್ಯಾಯವಾಗಲು ಬಿಡುವುದಿಲ್ಲ, ಅರ್ಹರ ಕಾರ್ಡ್‌ಗಳು ರದ್ದಾಗಿದ್ದರೆ ಈ ಬಗ್ಗೆ ಪಟ್ಟಿ ಕೊಡಲು ಸಂಬಂಧಪಟ್ಟ ಸಚಿವರಿಗೆ ಸೂಚನೆ ನೀಡಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ವಂಚಿತರಿಗೆ ಮರು ಅರ್ಜಿಗೆ ಅವಕಾಶ ಕಲ್ಪಿಸಿ ಕೊಡಬೇಕು ಎಂಬ ಸೂಚನೆ ನೀಡಿದ್ದೇವೆ. ರಾಜ್ಯ, ತಾಲ್ಲೂಕು, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಗಳು ಈ ಬಗ್ಗೆ ಪರಿಶೀಲಿಸಲಿವೆ. ಒಬ್ಬ ಬಡವನಿಗೂ ತೊಂದರೆ ಆಗಲು ಬಿಡುವುದಿಲ್ಲ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ಪ್ರತಿನಿಧಿಯಾಗಿ, ಪಕ್ಷದ ಅಧ್ಯಕ್ಷನಾಗಿ ನಾನು ಭರವಸೆ ನೀಡುತ್ತೇನೆ. ಯಾರೂ ಭಯ ಪಡುವ ಅಗತ್ಯವಿಲ್ಲ, ವಿರೋಧ ಪಕ್ಷಗಳು ಸುಮ್ಮನೆ ಮಾತನಾಡುತ್ತಿವೆ ಎಂದರು.

# ಅದಾನಿ ಷೇರುಗಳ ಮೌಲ್ಯ 2.19 ಲಕ್ಷ ಕೋಟಿ ರೂ. ಕುಸಿತ

**ಹಿಂಡನ್‌ಬರ್ಗ್ ವಿವಾದಕ್ಕಿಂತಲೂ ಎರಡು ಪಟ್ಟು ಕುಸಿತ ಕಂಡ ಸಮೂಹ**

ನವದೆಹಲಿ, ನ. 21 – ಅಮೆರಿಕದಲ್ಲಿ ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ವಿರುದ್ಧ ದೋಷಾರೋಪ ದಾಖಲಾಗಿರುವ ಹಿನ್ನೆಲೆಯಲ್ಲಿ, ಅದಾನಿ ಸಮೂಹದ ಷೇರುಗಳ ಮೌಲ್ಯ 2.19 ಲಕ್ಷ ಕೋಟಿ ರೂ.ಗಳಷ್ಟು ಕುಸಿದಿದೆ. ಇದು 2023ರಲ್ಲಿ ಹಿಂಡನ್‌ಬರ್ಗ್ ವರದಿಯಿಂದ ಆದ ಕುಸಿತಕ್ಕಿಂತ ಎರಡು ಪಟ್ಟು ಹೆಚ್ಚಾಗಿದೆ.

ಅದಾನಿ ಎಂಟರ್‌ಪ್ರೈಸಸ್ ಷೇರು ಮೌಲ್ಯ ಶೇ.22.61ರಷ್ಟು ಕುಸಿದಿದೆ. ಅದಾನಿ ಎನರ್ಜಿ ಸೊಲ್ಯೂಷನ್ಸ್ ಶೇ.20, ಅದಾನಿ ಗ್ರೀನ್ ಎನರ್ಜಿ ಶೇ.18.80, ಅದಾನಿ ಪೋರ್ಟ್ಸ್ ಶೇ.13.53, ಅಂಬುಜಾ ಸಿಮೆಂಟ್ಸ್ ಶೇ.11.98 ಹಾಗೂ ಅದಾನಿ ಟೋಟಲ್ ಗ್ಯಾಸ್ ಷೇರು ಮೌಲ್ಯ ಶೇ.10.40ರಷ್ಟು ಕುಸಿದಿದೆ.

ಅದಾನಿ ವಿಲ್ಮರ್ ಶೇ.9.98, ಅದಾನಿ ಪವರ್ ಶೇ.9.15, ಎಸಿಸಿ ಶೇ.7.20 ಹಾಗೂ ಎನ್.ಡಿ.ಟಿ.ವಿ. ಶೇ.0.06ರ ಕುಸಿತ ಕಂಡಿದೆ.

ಸಮೂಹದ ಕೆಲ ಷೇರುಗಳ ಕುಸಿತ ಅನುಮತಿಸಲಾದ ಗರಿಷ್ಠ ಮಟ್ಟದವರೆಗೂ ತಲುಪಿದೆ. ಒಟ್ಟಾರೆ ಕುಸಿತದ ಮೌಲ್ಯ 2,19,878 ಕೋಟಿ ರೂ. ಎಂದು ಅಂದಾಜಿಸಲಾಗಿದೆ.

ಬಿ.ಎಸ್.ಇ. ಸೂಚ್ಯಂಕ 422.59 ಅಂಕಗಳ ಕುಸಿತ ಕಂಡು 77,155ಕ್ಕೆ ತಲುಪಿದೆ. ಇದು ಶೇ.0.54ರ ಕುಸಿತವಾಗಿದೆ.

ಇತ್ತೀಚಿನ ದಿನಗಳಲ್ಲಿ ಷೇರುಪೇಟೆಯಲ್ಲಿ ಹಿಂಜರಿತವಿದೆ. ಆದರೆ, ಗುರುವಾರದ ಕುಸಿತ ಅದಾನಿ ಸಮೂಹಕ್ಕೆ ಸಂಬಂಧಿಸಿದ ಸುದ್ದಿಗಳನ್ನೇ ಆಧರಿಸಿದೆ ಎಂದು ಮೆಹ್ತಾ ಇಕ್ವಿಟೀಸ್ ಹಿರಿಯ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

# ಎಲೆಬೇತೂರಿನಲ್ಲಿ ನಾಳೆ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ

ದಾವಣಗೆರೆ, ನ.21- ಎಲೆಬೇತೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಕಾರ್ತಿಕೋತ್ಸವವು ನಾಡಿದ್ದು ದಿನಾಂಕ 23ರ ಶನಿವಾರ ನಡೆಯಲಿದೆ ಎಂದು ಕಮಿಟಿಯವರು ತಿಳಿಸಿದ್ದಾರೆ. ಅಂದು ಬೆಳಗ್ಗೆ ಶ್ರೀ ಆಂಜನೇಯ ಸ್ವಾಮಿ ವಿಶೇಷವಾಗಿ ಕುಂಕುಮ ಪೂಜೆ ಹಾಗೂ ಈಶ್ವರ ಮತ್ತು ಬಸವಣ್ಣ ದೇವರುಗಳಿಗೆ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ಬಿಲ್ವಪತ್ರೆ ಅರ್ಚನೆ, ಮಂಗಳಾರತಿ ಮಾಡಲಾಗುವುದು ಸಂಜೆ 6:30ಕ್ಕೆ ಕಾರ್ತಿಕ ಹಚ್ಚುವುದು, ಮಹಾಮಂಗಳಾರತಿ ನಂತರ ಪಳ್ಹಾರ ವಿನಿಯೋಗ ನಡೆಯಲಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ಧ, ಬಸವ ಭೀಮ ನಗರ , ಬೀಜ ನಿಗಮ, ಎಸ್.ಎಸ್ ಹೈ-ಟೆಕ್ ಆಸ್ಪತ್ರೆ ಸುತ್ತಮುತ್ತಲಿನಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ಇರುವುದಿಲ್ಲ.

# ಮಾದಿಗ, ಛಲವಾದಿ ಸಮಾವೇಶದ ಸ್ವಾಗತ ಸಮಿತಿ ಗೌರವಾಧ್ಯಕ್ಷರಾಗಿ ರವಿನಾರಾಯಣ್



ದಾವಣಗೆರೆ, ನ.21- ನಗರದಲ್ಲಿ ಡಿಸೆಂಬರ್ 15 ರಂದು ನಡೆಯಲಿರುವ ಮಾದಿಗ ಮತ್ತು ಛಲವಾದಿ ಸಮಾಜಗಳ ಸಮಾವೇಶದ ಸ್ವಾಗತ ಸಮಿತಿ ಗೌರವ ಅಧ್ಯಕ್ಷರನ್ನಾಗಿ ನಿವೃತ್ತ ಎಸ್.ಪಿ. ರವಿನಾರಾಯಣ್, ಕಾರ್ಯಾಧ್ಯಕ್ಷರನ್ನಾಗಿ ನಿವೃತ್ತ ಎಸ್.ಪಿ. ರುದ್ರಮುನಿ ಹಾಗೂ ಅಧ್ಯಕ್ಷರಾಗಿ ಬಿ.ಹೆಚ್. ವೀರಭದ್ರಪ್ಪ ಇವರುಗಳನ್ನು ಪ್ರವಾಸಿ ಮಂದಿರದಲ್ಲಿ ನಿನ್ನೆ ನಡೆದ 3ನೇ ಪೂರ್ವಭಾವಿ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಮಹಾನಗರಪಾಲಿಕೆಯ ಸದಸ್ಯ ಎಲ್.ಡಿ. ಗೋಣೆಪ್ಪ, ನಿವೃತ್ತ ಆಯುಕ್ತ ಎಸ್. ಶೇಖರಪ್ಪ ಛಲವಾದಿ, ದುರ್ಗೇಶ್ ಗುಡಿಗೇರಿ ವಕೀಲರು, ರಾಮಯ್ಯ ಛಲವಾದಿ, ಮಾದಿಗ ದಂಡೋರ ಸಮಿತಿಯ ಅಧ್ಯಕ್ಷ ಗುಡ್ಡಪ್ಪ, ಹನುಮಂತಪ್ಪ ಡಿ., ಗುರುಮೂರ್ತಿ ಎಂ. ಹರಿಹರ, ನಾಗರಾಜ್ ಭೈರಜ್ಜರ, ಎ. ನಾಗರಾಜಪ್ಪ ಆದಾಪುರ, ಶಿವಮೂರ್ತಿ ಬಿ.ಆರ್., ರಾಕೇಶ್ ಜಿ., ಸುರೇಶ್ ಕುಣೆಬೆಳಕೆರೆ, ಹೆಚ್.ಸಿ. ಶಾಂತಪ್ಪ, ಡಾ. ಜಗನ್ನಾಥ್, ನಿವೃತ್ತ ಡಿ.ಹೆಚ್.ಓ, ಹೆಚ್. ಯಮನೂರು ಗೌಡ್ರು, ಮಲ್ಲಪ್ಪ ಡಿಎಸ್‌ಎಸ್, ರಾಘವೇಂದ್ರ ಡಿ. ಕಡೆಮನಿ, ಜಿ. ಎಸ್. ಲೋಕೇಶ್, ಎ.ಕೆ. ಭೀಮಪ್ಪ, ಲಿಂಗರಾಜ್ ಎಂ., ನಿಂಗಪ್ಪ ಬಿ, ಭೀಮ್ ಆರ್ಮಿ ಮಂಜುನಾಥ್ ಬಿ.ಆರ್., ನಿರಂಜನ, ಶಂಕರ್ ಎನ್. ಮತ್ತಿತರರು ಹಾಜರಿದ್ದರು.

# ದೇಹದ ಜೊತೆಗೆ ಹಲ್ಲುಗಳ ಆರೋಗ್ಯವೂ ಅಷ್ಟೇ ಮುಖ್ಯ



**ಹಾಲಿವಾಣ**

ಮಲೇಬೆನ್ನೂರು, ನ.22- ಹಾಲಿವಾಣ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಮಲೇಬೆನ್ನೂರು ಲಯನ್ಸ್ ಕ್ಲಬ್ ಮತ್ತು ದಾವಣಗೆರೆಯ ಬಾಪೂಜಿ ದಂತ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಉಚಿತ ದಂತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ದಂತ ವೈದ್ಯರಾದ ಡಾ. ಗಜಾಲ್ ಸುಲ್ತಾನ್ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ದೇಹ ಆರೋಗ್ಯದ ಜೊತೆಗೆ ಹಲ್ಲುಗಳ ಆರೋಗ್ಯವೂ ಅಷ್ಟೇ ಮುಖ್ಯ ಎಂದು ತಿಳಿಸಿ, ಹಲ್ಲುಗಳ ಸ್ವಚ್ಛತೆ ಹಾಗೂ ಸಂರಕ್ಷಣೆ ಬಗ್ಗೆ ಮಕ್ಕಳಿಗೆ ವಿವರಿಸಿದರು.

ಓ.ಜಿ.ರುದ್ರಗೌಡ ಪ್ರಾಸ್ತಾವಿಕ ಮಾತನಾಡಿದರು. ಲಯನ್ಸ್ ಕ್ಲಬ್ ಅಧ್ಯಕ್ಷೆ ಶ್ರೀಮತಿ ಪಾರ್ವತಮ್ಮ ಇ.ಎಂ.ಮರುಳಸಿದ್ದೇಶ್, ಲಯನ್ಸ್ ವಲಯಾಧ್ಯಕ್ಷ ಚಿಟ್ಟಕ್ಕಿ ನಾಗರಾಜ್, ಮಾಜಿ ಅಧ್ಯಕ್ಷರಾದ ಇ.ಎಂ. ಮರುಳಸಿದ್ದೇಶ್, ಡಾ. ಚಂದ್ರಕಾಂತ್ ಮತ್ತು ಇತರರು ಭಾಗವಹಿಸಿದ್ದರು.

# ದಾವಣಗೆರೆ ಕ್ಲಬ್ ಜಾಮ್‌ಗೆ 4 ಚಿನ್ನದ ಪದಕ




ದಾವಣಗೆರೆ, ನ.21- ಕರ್ನಾಟಕ ರಾಜ್ಯ ಸ್ಟ್ರೆಂಥ್ ಲಿಫ್ಟಿಂಗ್ ಅಸೋಸಿಯೇ ಷನ್ (ದಾವಣಗೆರೆ) ವತಿಯಿಂದ ವಿನೋಬ ನಗರದ ಶ್ರೀ ಸಿದ್ಧಿವಿನಾಯಕ ಸಾಂಸ್ಕೃತಿಕ ಸಂಘದ ಆವರಣದಲ್ಲಿ ಕಳೆದ ವಾರ ನಡೆದ ರಾಜ್ಯಮಟ್ಟದ ಸ್ಟ್ರೆಂಥ್ ಲಿಫ್ಟಿಂಗ್ ಮತ್ತು ಇನ್‌ಕ್ಲೇನ್ ಬೆಂಚ್ ಚಾಂಪಿಯನ್ ಶಿಪ್-2024 ರಲ್ಲಿ ದಾವಣಗೆರೆ ಜಿಮ್ ಕ್ಲಬ್ ಕ್ರೀಡಾಪಟುಗಳು 4 ಚಿನ್ನದ ಪದಕಗಳನ್ನು ಪಡೆದುಕೊಂಡಿರುತ್ತಾರೆ.

85 ಕೆ.ಜಿ. ಮಾಸ್ಟರ್ ವಿಭಾಗದಲ್ಲಿ ದಾವಣಗೆರೆ ಅರ್ಬನ್ ಕೋ-ಆಪ್ ಬ್ಯಾಂಕಿನ ವ್ಯವಸ್ಥಾಪಕ ಕೆ.ಎಸ್. ಮಹೇಶ್ ಅವರು ಎರಡು ಚಿನ್ನದ ಪದಕ ಹಾಗೂ 82 ಕೆ.ಜಿ. ತೂಕದ ಸಬ್ ಜ್ಯೂನಿಯರ್ ವಿಭಾಗದಲ್ಲಿ ದಾವಣಗೆರೆ ಕ್ಲಬ್ ಜಿಮ್ ಕೋಚ್ ಗೋಪಾಲ್ ಜಿ. ಇವರ ಪುತ್ರ ಪ್ರಜ್ವಲ್ ಜಿ. ಎರಡು ಚಿನ್ನದ ಪದಕಗಳಿಗೆ ಭಾಜನರಾಗಿರುತ್ತಾರೆ.

ಈ ಸಾಧಕರನ್ನು ದಾವಣಗೆರೆ ಕ್ಲಬ್ ಆಡಳಿತ ಮಂಡಳಿಯ ಅಧ್ಯಕ್ಷ ಎ.ಬಿ. ಚಂದ್ರಶೇಖರ್, ಉಪಾಧ್ಯಕ್ಷ ಉಳವಯ್ಯ ಎಸ್.ಜಿ., ಕಾರ್ಯದರ್ಶಿ ರವಿಶಂಕರ್ ಪಲ್ಲಾಗಟ್ಟಿ, ಸಹ ಕಾರ್ಯದರ್ಶಿ ಐನಳ್ಳಿ ಜಯದೀಪ್, ಖಜಾಂಚಿ ಪ್ರಶಾಂತ್ ಗುಪ್ತಾ ಎಸ್.ಕೆ., ನಿರ್ದೇಶಕರುಗಳಾದ ಬೆಳ್ಳೂಡಿ ಸದಾನಂದ, ರುದ್ರೇಶ್ ಹೆಚ್.ವಿ., ಬಾದಾಮಿ ಮಲ್ಲಿಕಾರ್ಜುನ್, ಅಭಿಷೇಕ್ ಬೇತೂರು, ವಿಶ್ವನಾಥ ಬಿ. ಪಾಟೀಲ್, ಸುಪುತ್ರಕುಮಾರ್ ಬಿ.ಟಿ. ಅಭಿನಂದಿಸಿದ್ದಾರೆ.

## ವಿದ್ಯಾರ್ಜನೆಗೆ ಸಹಕರಿಸಿದ ದಾನಿಗಳಿಗೆ ಭಾವಸಾರ ಸಮಾಜದಿಂದ ಸನ್ಮಾನ



ದಾವಣಗೆರೆ, ನ.21- ಭಾವಸಾರ ಕ್ಷತ್ರಿಯ ವಿದ್ಯಾವರ್ಧಕ ಸಂಘದ ಹಾಸ್ಟೆಲ್‌ಗೆ ಪೇಂಟಿಂಗ್ ಹಾಗೂ ಪೇಂಟಿಂಗ್ ಸಾಮಗ್ರಿಗಳನ್ನು ಉಚಿತವಾಗಿ ನೀಡಿ ವಿದ್ಯಾರ್ಜನೆಗೆ ಸಹಕಾರ ನೀಡಿದ ಹೆಚ್.ಜೆ. ತಿಪ್ಪೇಸ್ವಾಮಿ ಅವರನ್ನು ಹಾಗೂ ಸಹಕರಿಸಿದ ಇಂಜಿನಿಯರ್ ಸುನಿಲ್ ಅವರನ್ನು ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಜಯಪ್ರಕಾಶ್ ಅಂಬರ್‌ಕರ್, ಕಾರ್ಯದರ್ಶಿ ಪ್ರಶಾಂತ್ ಅಂಬರಕರ್, ಉಪಾಧ್ಯಕ್ಷ ಗುರುನಾಥ ಮಿರಜಕರ್ ಹಾಗೂ ವಧು-ವರರ ಸಂಘದ ಅಧ್ಯಕ್ಷ ಸತ್ಯನಾರಾಯಣ ಸಾಕ್ರೆ ಉಪಸ್ಥಿತರಿದ್ದರು.

## ನಗರದಲ್ಲಿ ಅಪರಿಚಿತ ಮಹಿಳೆ ಶವ ಪತ್ತೆ



ದಾವಣಗೆರೆ, ನ.21- ನಗರದ ಎ.ಪಿ.ಎಂ.ಸಿ. 'ಡಿ' ಬ್ಲಾಕ್‌ನ ಅಮರೇಶ್ವರ ದಲ್ಲಾಳಿ ಮಂಡಿ ಹತ್ತಿರದಲ್ಲಿ ಸುಮಾರು 50 ವರ್ಷ ವಯಸ್ಸಿನ ಅಪರಿಚಿರ ಮಹಿಳೆಯ ಶವ ಇದೇ ದಿನಾಂಕ 18ರ ಸೋಮವಾರ ಮಧ್ಯಾಹ್ನ ಪತ್ತೆಯಾಗಿದೆ.

ದುಂಡು ಮುಖ, ಸಾಧಾರಣ ಮೈಕಟ್ಟು, ಹಸಿರು ಬಣ್ಣದ ಪಾಲಿಸ್ಟರ್ ಸೀರೆ, ಹಸಿರು ಬಣ್ಣದ ಲಂಗ, ಆಕಾಶ ನೀಲಿ ಬಣ್ಣದ ಜಾಕೆಟ್ ಧರಿಸಿರುವ ಮಹಿಳೆಯ ಶವ ಪತ್ತೆಯಾಗಿದ್ದು, ಮೃತರ ವಾರಸುದಾರರು ಆರ್.ಎಂ.ಸಿ. ಯಾರ್ಡ್ ಪೊಲೀಸ್ ಠಾಣೆಗಾಗಲೀ ಅಥವಾ ಪೊಲೀಸ್ ನಿಯಂತ್ರಣ ಕೋಣೆ (ಫೋನ್: 08192-272008) ಯನ್ನು ಸಂಪರ್ಕಿಸಬಹುದು.

# ಎಸ್‌ಜೆಎಂ ಶಾಲೆಯಲ್ಲಿ ಮಕ್ಕಳ ದಿನಾಚರಣೆ




ದಾವಣಗೆರೆ, ನ.21- ಮಾನವನ ಜೀವನದಲ್ಲಿ ಬಾಲ್ಯ ದಿನಗಳ ಕ್ಷಣಗಳು ಅವು ಬದುಕಿನ ಸ್ವರ್ಗದ ಕ್ಷಣಗಳಿಗೆ ಸಮಾನವಾಗಿವೆ ಎಂದು ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ವಿರಕ್ತಮಠದಲ್ಲಿರುವ ಎಸ್.ಜೆ. ಎಂ. ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆ ಸಮಾರಂಭದ ನೇತೃತ್ವವನ್ನು ವಹಿಸಿಕೊಂಡು ಶ್ರೀಗಳು ಆಶೀರ್ವಚನ ನೀಡಿದರು.

ಬಹಳಷ್ಟು ಜನರು ಸ್ವರ್ಗವನ್ನು ನೋಡಬೇಕೆಂದು ಬಹಳ ಆಸೆ ಪಡುತ್ತಾರೆ. ನಿಜವಾಗಿಯೂ ಮಾನವನ ಜೀವನದಲ್ಲಿ ಸ್ವರ್ಗದ ಅನುಭವ ಸಿಗಬೇಕಾದರೆ ನಮ್ಮ ಬಾಲ್ಯಕ್ಕೆ ನಾವು ಹೋಗಬೇಕು. ಅರ್ಥಾತ್ ನಮ್ಮ ಮನಸ್ಸು ಮಗುವಾಗಬೇಕು, ಆಗ ಮಾತ್ರ ಬದುಕಿನ ಪ್ರತಿಕ್ಷಣವೂ ಸ್ವರ್ಗದ ಅನುಭವವನ್ನು ಪಡೆಯಲು ಸಾಧ್ಯ. ಮಾನವ ಹುಟ್ಟುತ್ತಾ ವಿಶ್ವಮಾನವನಾಗಿರುತ್ತಾನೆ. ಬೆಳೆಯುತ್ತಾ ಜಾತಿ ಮಾನವ, ಮತೀಯ ಮಾನವ ಆಗುತ್ತಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಅವನನ್ನು ಮತ್ತೆ ವಿಶ್ವಮಾನವನನ್ನಾಗಿ ರೂಪಿಸುವ ಶಿಕ್ಷಣವನ್ನು ನೀಡಬೇಕು ಎಂದು ಸ್ವಾಮೀಜಿ ಹೇಳಿದರು.

ಮುಂಬೈನಲ್ಲಿ ನಡೆದ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿರುವ 9 ನೇ ತರಗತಿ ವಿದ್ಯಾರ್ಥಿ ಶೋಯೇಬ್ ಪಠಾಣ್‌ಗೆ ಸ್ವಾಮೀಜಿಗಳು ಅಭಿನಂದಿಸಿದರು.

ಸಮಾರಂಭದಲ್ಲಿ ಪ್ರಾಂಶುಪಾಲ ರೋಷನ್ ಜಮೀರ್, ಶಾಲೆಯ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

# ರಾಣೇಬೆನ್ನೂರಿನಲ್ಲಿ ದೇವಲ ಮಹರ್ಷಿ ಜಯಂತಿ ಆಚರಣೆ



ರಾಣೇಬೆನ್ನೂರು, ನ.21- ಇಲ್ಲಿನ ದೇವಾಂಗ ಸೇವಾ ಸಂಘ, ಮಹಿಳಾ ಸಂಘ, ಯುವಕ ಸಂಘ ಹಾಗೂ ನೌಕರರ ಸಂಘದ ವತಿಯಿಂದ ಪರಮೇಶ್ವರನ ಪಾಲನೇತ್ರದಿಂದ ಅವತರಿಸಿ ದೇವ, ಮಾನವರ ಮಾನ ರಕ್ಷಣೆಗೆ ವಸ್ತ್ರ ಸೂತ್ರ ನೀಡಿದ ದೇವಲ ಮಹರ್ಷಿ ಜಯಂತಿ ಆಚರಿಸಲಾಯಿತು.

ಇಲ್ಲಿನ ಕುದುರೆ ಗಲ್ಲಿಯ ಶ್ರೀ ಬನಶಂಕರಿ ದೇವಿ ದೇವಸ್ಥಾನದಲ್ಲಿ ಶ್ರೀ ಷಣ್ಮುಖ ಸ್ವಾಮಿ ದೇವಾಂಗ ಮಠ ಅವರಿಂದ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ದೇವಲ ಮಹರ್ಷಿ ಭಾವ ಚಿತ್ರದ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಕುರುಬಗೇರಿ, ಎಂ.ಜಿ.ರಸ್ತೆ, ದೊಡ್ಡಪೇಟೆ ಮೂಲಕ ಕುಂಬಾರಗಲ್ಲಿಯ ಶ್ರೀ ರಾಮಲಿಂಗ ಮಠಕ್ಕೆ ಆಗಮಿಸಿ ವಿಶೇಷ ಪೂಜೆ ನಂತರ ಮಹಿಳೆಯರಿಗೆ ವಸ್ತ್ರದಾನ ಹಾಗೂ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

ಸಮಾಜದ ಮುಖಂಡರಾದ ಬಸವರಾಜ ಲಕ್ಷ್ಮೇಶ್ವರ, ಡಾ. ಬಸವರಾಜ ಕೇಲಗಾರ, ಅಶೋಕ ದುರ್ಗದಸೀಮಿ, ಸಂಕಪ್ಪ ಮಾರನಾಳ, ಲಕ್ಷ್ಮಿಕಾಂತ ಹುಲಗೂರ, ಗಣೇಶ ಸಿರಗೂರ, ನಾಗರಾಜ ಲಕ್ಷ್ಮೇಶ್ವರ, ಗಿರೀಶ ಗುಳೇದಗುಡ್ಡ, ರಮೇಶ ದುರ್ಗದಸೀಮಿ, ಸತೀಶ ಕೇಲಗಾರ ಹಾಗೂ ಇತರರು ಭಾಗವಹಿಸಿದ್ದರು.


## ಹಿರೇಕೋಗಲೂರು ಹೆಚ್ .ಯು. ಗುರುಮೂರ್ತಿ ನಿಧನ



ಚನ್ನಗಿರಿ ತಾಲ್ಲೂಕು ಹಿರೇಕೋಗಲೂರು ಗ್ರಾಮದ
ದಿ. ಹಾದಿಮನೆ ಉಮಾಮೇಶ್ವರಪ್ಪ ಮಲ್ಲಮ್ಮ ಅವರ ಪುತ್ರ
**ಶ್ರೀ ಹೆಚ್. ಯು. ಗುರುಮೂರ್ತಿ (65)**
ಇವರು ದಿನಾಂಕ 21.11.2024ರ ಗುರುವಾರ ಸಂಜೆ 5.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.11.2024 ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಹಿರೇಕೋಗಲೂರಿನಲ್ಲಿ ನಡೆಯಲಿದೆ.

ಹೆಚ್.ಯು. ಗುರುಮೂರ್ತಿ ಅವರ ನಿಧನಕ್ಕೆ ಶಿಕ್ಷಣ ತಜ್ಞ **ಡಾ. ಹೆಚ್.ವಿ. ವಾಮದೇವಪ್ಪ**, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ **ಬಿ. ವಾಮದೇವಪ್ಪ** ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ಬೀಸನಹಳ್ಳಿ ಬಸವರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಶ್ಯಾಗಲೆ ಗ್ರಾಮದ ವಾಸಿ
**ಬೀಸನಹಳ್ಳಿ ಬಸವರಾಜಪ್ಪ**
ಇವರು ದಿನಾಂಕ 22.11.2024ರ ಬೆಳಗಿನ ಜಾವ 2 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 96 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22.11.2024ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಶ್ಯಾಗಲೆ ಗ್ರಾಮ ತೋಟದಲ್ಲಿ ನೆರವೇರಿಸಲಾಗುವುದು.
**ದುಃಖತಪ್ತರು : ಬೀಸನಹಳ್ಳಿ ವಂಶಸ್ಥರು, ಶ್ಯಾಗಲೆ ಗ್ರಾಮಸ್ಥರು ಹಾಗೂ ಅಪಾರ ಬಂಧು-ಮಿತ್ರರು. ಮೊ. : 79967 91373**

## ಎರಡನೇ ವರ್ಷದ ಪುಣ್ಯಸ್ಮರಣೆ



**ಶರಣ ಶ್ರೀ ಪಿ.ಎಂ.ಎಸ್. ಮಹದೇವಪ್ಪನವರು**
ಜನನ : 10.05.1938 - ಮರಣ : 22.11.2022

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿರುವ, ನಿಮ್ಮ ಆಶೀರ್ವಾದವೇ ನಮಗೆ ಶ್ರೀರಕ್ಷೆ...

ಮಕ್ಕಳಾದ : **ಶ್ರೀಮತಿ ರೂಪಾ ಮತ್ತು ಶ್ರೀ ಬಸವರಾಜ್ ಪಟ್ಟೇದ**
**ಶ್ರೀ ಪ್ರಮೋದ್ ಪಟ್ಟೇದ, ಶ್ರೀಮತಿ ಭಾರತಿ ಅಶೋಕ್**
ಮೊಮ್ಮಕ್ಕಳಾದ : **ಸೂರಜ್, ಅನುಜ್, ಅದಿತ್ಯ, ಅಕ್ಷಯ್**

ಇಂದ : **ಗ್ಲೋಬಲ್ ಟೆಕ್ನಾಲಜಿ**
**ಕಂಪ್ಯೂಟರ್ ಸೇಲ್ಸ್ & ಸರ್ವೀಸಸ್**
#76/3A, 2ನೇ ಮೇನ್, ಪಿಜೆ ಬಡಾವಣೆ, ಎವಿಕೆ ಕಾಲೇಜ್ ರಸ್ತೆ,
ದಾವಣಗೆರೆ. ಫೋ. : 98443 20980, 91132 42480

# ವಾಟ್ಸ್‌ಆಪ್‌ನಲ್ಲಿ ಅದಾನಿ ಲಂಚದ ಮಾಹಿತಿ

ನವದೆಹಲಿ, ನ. 22 - ಉದ್ಯಮಿ ಗೌತಮ್ ಅದಾನಿ ಅವರ ಸಂಬಂಧಿ ಸಾಗರ್ ಅದಾನಿ ಹಾಗೂ ಅದಾನಿ ಗ್ರೀನ್ ಎನರ್ಜಿ ಸಿಇಒ ವಿನೀತ್ ಜೈನ್ ಅವರ ಮೊಬೈಲ್ ಮತ್ತು ವಾಟ್ಸ್‌ಆಪ್‌ಗಳಲ್ಲಿ ಲಂಚದ ವಿವರಗಳು ದೊರೆತಿವೆ ಎಂದು ಅಮೆರಿಕದಲ್ಲಿ ದಾಖಲಿಸಲಾದ ಪ್ರಕರಣದಲ್ಲಿ ತಿಳಿಸಲಾಗಿದೆ.

ಲಂಚದ ಮೇಲೆ ಸಾಗರ್ ಅದಾನಿ ತಮ್ಮ ಮೊಬೈಲ್ ಮೂಲಕ ನಿಗಾ ಇರಿಸಿದ್ದರು. ಅಜ್ಯೂರ್ ಪವರ್ ತನ್ನ ಪಾಲಿನ ಲಂಚ ನೀಡಿದ ಬಗ್ಗೆ ವಿನೀತ್ ಜೈನ್ ತಮ್ಮ ಫೋನ್‌ಗಳಿಂದ ಫೋಟೋ ತೆಗೆದಿದ್ದರು ಎಂದು ಆರೋಪಿಸಲಾಗಿದೆ.

ಲಂಚ ನೀಡುವ ಸಂದರ್ಭದಲ್ಲಿ ಗೌತಮ್ ಅದಾನಿ ಅವರನ್ನು 'ಎಸ್.ಎ.ಜಿ.', 'ನ್ಯೂಮರೋ ಉನೋ' ಹಾಗೂ 'ದಿ ಬಿಗ್ ಮ್ಯಾನ್' ಎಂದು ಗುಪ್ತ ನಾಮದಿಂದ ಗುರುತಿಸಲಾಗುತ್ತಿತ್ತು. ಜೈನ್ ಅವರನ್ನು 'ವಿ', 'ಸ್ನೇಕ್' ಹಾಗೂ 'ನ್ಯೂಮರೋ ಉನೊ ಮೈನಸ್ ಒನ್' ಎಂದು ಗುರುತಿಸಲಾಗುತ್ತಿತ್ತು.

ಸರ್ಕಾರಿ ಅಧಿಕಾರಿಗಳಿಗೆ 265 ದಶಲಕ್ಷ ಡಾಲರ್‌ಗಳನ್ನು ಹೂಡಿಕೆ ಹೆಸರಿನಲ್ಲಿ ನೀಡಲಾಗಿತ್ತು ಎಂದು ಡೆಪ್ಯೂಟಿ ಅಸಿಸ್ಟೆಂಟ್ ಅಟಾರ್ನಿ ಜನರಲ್ ಮಿಲ್ಲರ್ ಹೇಳಿಕೆ ನೀಡಿದ್ದಾರೆ.

ಅಮೆರಿಕದ ನ್ಯಾಯ ಇಲಾಖೆ ಹಾಗೂ ಅಮೆರಿಕದ ಷೇರು ವಿನಿಮಯ ಆಯೋಗಗಳು ಈ ಬಗ್ಗೆ ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿವೆ. ಅಮೆರಿಕದ ಹೂಡಿಕೆದಾರರು ಇಲ್ಲವೇ ಅಮೆರಿಕದ ಮಾರುಕಟ್ಟೆಗೆ ಸಂಬಂಧಿಸಿದಂತೆ ಭ್ರಷ್ಟಾಚಾರದ ಆರೋಪಗಳು ಕಂಡು ಬಂದಲ್ಲಿ, ಅಮೆರಿಕ ಕ್ರಮ ತೆಗೆದುಕೊಳ್ಳುತ್ತದೆ.

265 ದಶಲಕ್ಷ ಡಾಲರ್ ಲಂಚ ನೀಡಿದ ಮಾಹಿತಿಯನ್ನು ವಿವರವಾಗಿ ದಾಖಲಿಸಲಾಗಿದೆ. ಉದ್ಯಮಿ ಗೌತಮ್ ಅದಾನಿ ವೈಯಕ್ತಿಕವಾಗಿ ಅಧಿಕಾರಿಗಳನ್ನು ಹಲವು ಬಾರಿ ಭೇಟಿ ಮಾಡಿದ್ದಾರೆ ಎಂದು ಪ್ರಾಸಿಕ್ಯೂಟರ್‌ಗಳು ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಆರೋಪಿಯಾಗಿರುವ ಮಾಜಿ ಕಾರ್ಯಕಾರಿ ಅಧಿಕಾರಿ ರೂಪೇಶ್ ಅಗರ್‌ವಾಲ್, ಪವರ್ ಪಾಯಿಂಟ್ ಹಾಗೂ ಎಕ್ಸೆಲ್ ಮೂಲಕ ಲಂಚ ಯೋಜನೆಗಳನ್ನು ತಯಾರಿಸಿದ್ದರು. ಈ ಮಾಹಿತಿಯನ್ನು ಇತರೆ ಆರೋಪಿಗಳ ಜೊತೆ ಹಂಚಿಕೊಂಡಿದ್ದರು ಎಂದು ಆರೋಪಿಸಲಾಗಿದೆ.

ಈ ಪ್ರಕರಣದಲ್ಲಿ ಇನ್ನೋರ್ವ ಮಾಜಿ ಕಾರ್ಯಕಾರಿ ಅಧಿಕಾರಿ ರಣಜಿತ್ ಗುಪ್ತ, ಕೆನಡಾದ ಹೂಡಿಕೆ ಕಂಪನಿಯ ಮಾಜಿ ಉದ್ಯೋಗಿಗಳಾದ ಸೈರಿಲ್ ಕ್ಯಾಬನಿಸ್, ಸೌರಭ್ ಅಗರ್‌ವಾಲ್ ಹಾಗೂ ದೀಪಕ್ ಮಲ್ಹೋತ್ರ ಸಹ ಆರೋಪಿಗಳಾಗಿದ್ದಾರೆ.

## ದಾವಣಗೆರೆ ಹಳೆ ಊರಿನ ಗೌರಿ ಆರತಿಯ ಸ್ವಾರಸ್ಯಗಳು...




# 'ಕದ್ದರೆ ಸಕ್ಕರೆ ಅಚ್ಚು, ಹಿಡಿದು ತಂದು ಚಚ್ಚು?!!..

ಹೆಚ್.ಬಿ. ಮಂಜುನಾಥ್
ಹಿರಿಯ ಪತ್ರಕರ್ತ, ದಾವಣಗೆರೆ.





ಗೌರಿ ಆರತಿಯ ಹಾಡುಗಳು ಹಾಗೂ ಸಕ್ಕರೆ ಅಚ್ಚು ತಿನ್ನುವ ಮಕ್ಕಳ ಬಗ್ಗೆ ಹೇಳಿದ್ದೆ. ಈಗ ಸಕ್ಕರೆ ಅಚ್ಚುಗಳನ್ನು ಕದಿಯುತ್ತಿದ್ದವರ ಬಗ್ಗೆ ಹೇಳುವೆ, ಹಾಗಂತ ಇವರು ಕಳ್ಳರಲ್ಲ, ಇವರು ಸಹಾ ಸಕ್ಕರೆ ಅಚ್ಚು ಗಳನ್ನು ಇಷ್ಟಪಡುವವರು ಅಷ್ಟೇ.

ಶೀಗೆ ಹುಣ್ಣಿಮೆ ಹಾಗೂ ಕಾರ್ತಿಕ ಹುಣ್ಣಿಮೆ ಈ ಎರಡು ದಿನಗಳಲ್ಲಿ ಮಾತ್ರ ಗೌರಿ ಆರತಿಗೆ ಸಕ್ಕರೆ ಅಚ್ಚು ತೆಗೆದುಕೊಂಡು ಹೋಗುವುದು. ತವರು ಮನೆಗೆ ಬಂದ ಗೌರಿ ಶಿವನೊಡನೆ ವಾಪಸ್ ಕೈಲಾಸಕ್ಕೆ ಹೊರಟಾಗ ಅವಳಿಗೆ ಉಡಿತುಂಬಿ ಆರತಿ ಮಾಡಲು ಸಕ್ಕರೆ ಅಚ್ಚುಗಳನ್ನು ಒಯ್ಯುವುದು ಪದ್ಧತಿ. ಅದರಲ್ಲೂ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದಲ್ಲಿ ಈ ಎರಡು ಹುಣ್ಣಿಮೆಗಳಂದು ಕೂರಿಸಿ ಅಲಂಕರಿಸಿರುವ ಶಿವ ಪಾರ್ವತಿ ವಿಗ್ರಹಗಳಂತೂ ತುಂಬಾ ಮನಮೋಹಕ.

ಕಿನ್ನಾಳ ಕಲೆಯ ಶೈಲಿಯಲ್ಲಿ ಮರದಲ್ಲಿ ಮಾಡಿದ ಆಳೆತ್ತರದ ಈ ಗೊಂಬೆಗಳ ವಿಶೇಷವೆಂದರೆ ನಂದಿಯ ಮೇಲೆ ಶಿವ ಕುಳಿತುಕೊಂಡು ತನ್ನ ಮುಂಭಾಗದಲ್ಲಿ ಪಾರ್ವತಿಯನ್ನು ಕೂರಿಸಿಕೊಂಡಿರುತ್ತಾನೆ. ನೀಲ ವರ್ಣದ ಶಿವನ ಮುಂದೆ ಬಿಳಿವರ್ಣದ ಗೌರಿ ಮುದ್ದಾಗಿ ಕಾಣುತ್ತಿರುತ್ತಾಳೆ. ಈ ಗೌರಿಗೆ ಉಡಿ ತುಂಬಲು ಹಳೆ ಊರಿನ ಎಲ್ಲಾ ಪ್ರದೇಶಗಳಿಂದ ಸಕ್ಕರೆ ಅಚ್ಚುಗಳ ಸಹಿತ ಆರತಿ ತರುವ ಹೆಣ್ಣುಮಕ್ಕಳು ಈಗ ಐದಾರು ದಶಕಗಳ ಹಿಂದೆ ದೇವಸ್ಥಾನದ ಬಳಿ ಬರುವವರೆಗೂ ಸಂತೋಷ ಸಡಗರದಿಂದ ಹಾಡು ಹೇಳುತ್ತಾ ಬಂದರೆ ದೇವಸ್ಥಾನದ ಬಳಿ ಬರುವಾಗ ಆತಂಕಕ್ಕೆ ಒಳಗಾಗುತ್ತಿದ್ದರು!. ಕಾರಣ ಆರತಿ ತಟ್ಟೆಗಳಲ್ಲಿ ಜೋಡಿಸಿ ತಂದ ಸಕ್ಕರೆ ಅಚ್ಚುಗಳನ್ನು ಅಪಹರಿಸುವ ಹುಡುಗರುಗಳು ಅಲ್ಲಿರುತ್ತಿದ್ದರು. ಆಗೆಲ್ಲ ಈಗಿನಂತೆ ರಸ್ತೆಯಲ್ಲಿ ಅಷ್ಟಾಗಿ ಜನ ಸಂಚಾರ ಇರುತ್ತಿರಲಿಲ್ಲ. ಬೀದಿ ದೀಪಗಳು ಈಗಿನಷ್ಟು ಪ್ರಖರವಾಗಿ ಇರುತ್ತಿರಲಿಲ್ಲ. ದೇವಸ್ಥಾನದ ಎದುರು ರಸ್ತೆಯಲ್ಲಿ ಮಂದ ಬೆಳಕಿನ ಒಂದು ಮರ್ಕ್ಯೂರಿ ಲೈಟ್ ನೇತಾಡುತ್ತಿತ್ತು ಅಷ್ಟೇ.

ಸಕ್ಕರೆ ಅಚ್ಚುಗಳನ್ನು ಹಾರುಬಡಿದ ಅಂದರೆ ಅಪಹರಿಸಿದ ಹುಡುಗರು ದೇವಸ್ಥಾನದ ಕಣದ ಬಲಪಕ್ಕದ ಕಟ್ಟೆ ಹತ್ತಿ, ಬಯಲು ದಾಟಿ, ಅಲ್ಲಿದ್ದ ಚಿಕ್ಕ ಚಿಕ್ಕ ಮನೆಗಳ ಸಂದಿನಿಂದ ಓಡಿ, ಕಮ್ಮಾರಿಕೆ ಮಾಡುವ ಕುಲುಮೆಯ ಕಡೆ ಹೋಗಿ, ಅದರಿಂದ ಆಚೆ ಐನಳ್ಳಿಯವರ ಬೆಂಕಿ ಪೊಟ್ಟಣದ ವ್ಯಾನ್ ನಿಲ್ಲುವ ಎದುರುಗಡೆಯ ಸುಣ್ಣದ ಗಾರೆ ಅರೆಯುತ್ತಿದ್ದುದರ ಅವಶೇಷಗಳ ಬಳಿ ಕುಳಿತು ಸಕ್ಕರೆ ಅಚ್ಚು ತಿಂದು ಮತ್ತೆ ದೇವಸ್ಥಾನದ ಬಳಿ ಬಂದು ಸಂಭಾವಿತರಂತೆ ಅಲ್ಲೇ ತಿರುಗಾಡುತ್ತಿರುತ್ತಿದ್ದರು.

ಅಂತವರು ಯಾರೆಂದು ದೇವಸ್ಥಾನದವರಿಗೂ ಗೊತ್ತಿತ್ತು. ಇವರ ಉಪಟಳ ಜಾಸ್ತಿಯಾದಂತೆ ಒಮ್ಮೆ ದೇವಸ್ಥಾನದ ಹಿರಿ ತಲೆಗಳು ಆಲೋಚನೆ ಮಾಡಿದರು. ದಾವಳಗಿ ಕೊಟ್ರಪ್ಪ ಇವರು ಆಗ ಜನಪ್ರಿಯವಾಗಿದ್ದ ಫ್ಯಾನ್ಸಿ ಅಂಗಡಿ ಅಲಂಕಾರ ಸ್ಟೋರ್ ಷಣ್ಮುಖಪ್ಪನವರ ಮಾವ ಇರಬೇಕು, ಈ ದಾವಳಗಿ ಕೊಟ್ರಪ್ಪ ಅಮಾವಾಸ್ಯೆ ರಾತ್ರಿ ಭಜನೆ ಪ್ರಸಾದವಾಗಿ ಮಂಡಕ್ಕಿ ಉಸುಳಿಯನ್ನು ತುಂಬಾ ಸೊಗಸಾಗಿ ಮಾಡುತ್ತಿದ್ದರು. ಆದರೆ ಕೊಡುವಾಗ ಮಾತ್ರ ಅವರದೇ ವಿಧಾನ ಅನುಸರಿಸುತ್ತಿದ್ದರು. ಆ ಸ್ವಾರಸ್ಯವನ್ನು ಮುಂದೊಮ್ಮೆ ಬರೆಯುವೆ)

ಸಕ್ಕರೆ ಅಚ್ಚು ಹಾರು ಬಡಿಯುವ ಹುಡುಗರನ್ನು ಹಿಡಿದು ತಂದು ಚಚ್ಚಬೇಕು ಎಂದು ದಾವಳಗಿ ಕೊಟ್ರಪ್ಪ ಹೇಳಿದರು. ಆದರೆ ಮತ್ತೋರ್ವ ಹಿರಿಯರಾದ ಬಹುಷಃ ಮಾಗಾನಹಳ್ಳಿ ಗುರುಪಾದಪ್ಪ ಇರಬೇಕು ಅವರು "ಕೊಟ್ರಪ್ಪಾ.. ಆ ಹುಡ್ರು ನಮಗೆ ಬೇಕಾಗ್ತಾರೆ, ಹಂಗೆಲ್ಲಾ ಹೊಡೆಯೋದು ಬ್ಯಾಡ, ನಾನು ಬೇರೆ ಐಡಿಯಾ ಮಾಡ್ತೀನ್ ತಡೀ" ಅಂದರು.

ರಥೋತ್ಸವದ ಸಮಯದಲ್ಲಿ ತೇರು ಕಟ್ಟುವಾಗ ಸಹಾಯ ಮಾಡಲು, ತೇರಿನ ಹಿತ್ತಾಳೆ ತಗಡುಗಳನ್ನು ತಿಕ್ಕಿ ತೊಳೆದು ಜೋಡಿಸಿಡಲು, ತೇರಿನ ಹಿಂದಿನ ರಾತ್ರಿ ಸೊಪ್ಪು ಸದೆಗಳನ್ನು ತಂದು ಬೀದಿಯುದ್ದಕ್ಕೂ ಕಂಬಕ್ಕೆ ಕಟ್ಟಿ ಅಲಂಕಾರ ಮಾಡಲು, ತೇರಿನ ದಿನ ಮಾರ್ಗದುದ್ದಕ್ಕೂ ತೆಂಗಿನಕಾಯಿ ಒಡೆದುಕೊಡಲು ಮುಂತಾಗಿ ಅನೇಕ ಕಾರ್ಯಗಳಿಗೆ ಈ ಪೈಕಿ ಕೆಲವು ಹುಡುಗರುಗಳ ಅಗತ್ಯವಿತ್ತು.

ಸಕ್ಕರೆ ಅಚ್ಚು ಅಪಹರಿಸುವ ಆ ಹುಡುಗರನ್ನು ಹುಣ್ಣಿಮೆಯ ದಿನ ಬೆಳಿಗ್ಗೆ ಗುರುಪಾದಪ್ಪ ಕರೆಸಿ "ಲೇ ಹುಡ್ರಾ, ಸಂಜಿ ಆರ್ತಿ ತರೋರ ಸಕ್ರಿ ಅಚ್ಚು ಯಾರೋ ಕೆಟ್ಟ ಹುಡ್ರು ಹಾರ್ ಬಡೀತಾರಂತೆ, ನೀವು ಕಾದಿದ್ದು ಅಂತಾ ಹುಡ್ರು ಹತ್ರಾ ಬರದಂಗೆ ನೋಡ್ಕಾಬೇಕ್ರಲೇ" ಎಂದರು.

ಹುಡುಗರು "ಆಗಲಣ್ಣ, ಆಗ್ಲಣ್ಣ" ಎಂದರು. ಸಕ್ಕರೆ ಅಚ್ಚಿನ ಹಾರು ಬಡಿಯುವಿಕೆ ನಿಂತೇ ಹೋಯಿತು!!. ಗುರುಪಾದಪ್ಪನವರ ಐಡಿಯಾ ಯಶಸ್ವಿಯಾಯಿತು.

**ಗೌರಿ ಆರತಿಯ ಸ್ವಾರಸ್ಯಗಳು ಇನ್ನೂ ಹೇಳಿದಷ್ಟೂ ಇವೆ. ಆದರೆ ಇಲ್ಲಿಗೆ ಮುಗಿಸುವೆ. ಬೇರೆ ಸ್ವಾರಸ್ಯಕರ ವಿಚಾರಗಳನ್ನು ಮುಂದೆ ಬರೆಯುವೆ.**

# ಟೆಂಡರ್ ಪದ್ಧತಿ ಮೂಲಕ ಭತ್ತ ಖರೀದಿ ವಹಿವಾಟು ನಡೆಸುವಂತೆ ರೈತರ ಒತ್ತಾಯ



ದಾವಣಗೆರೆ, ನ.21- ಭತ್ತ ಹಾಗೂ ಮೆಕ್ಕೆಜೋಳ ಖರೀದಿ ವಹಿವಾಟನ್ನು ಟೆಂಡರ್ ಪದ್ಧತಿ ಮೂಲಕ ಮಾಡುವುದು ಸೇರಿದಂತೆ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಜಿಲ್ಲಾ ರೈತ ಒಕ್ಕೂಟವು ಗುರುವಾರ ಎಪಿಎಂಸಿಗೆ ಒತ್ತಾಯಿಸಿತು.

ನಗರದ ಎಪಿಎಂಸಿ ಆವರಣದಲ್ಲಿ, ಮಾರುಕಟ್ಟೆ ಸಮಿತಿ ಕಾರ್ಯದರ್ಶಿಗಳಿಗೆ ಮನವಿ ಅರ್ಪಿಸಿ. ಬೇಡಿಕೆ ಈಡೇರಿಸುವಂತೆ ರೈತರು ಆಗ್ರಹಿಸಿದರು.

ಈ ವೇಳೆ ರೈತ ಮುಖಂಡ ಬಿ.ಎಂ. ಸತೀಶ್ ಕೊಳೇನಹಳ್ಳಿ ಮಾತನಾಡಿ, ಜಿಲ್ಲೆಯಲ್ಲಿ 1.5 ಲಕ್ಷ ಎಕರೆ ಪ್ರದೇಶದಲ್ಲಿ ಭತ್ತವನ್ನು ಬೆಳೆದಿದ್ದು, ಬೆಳೆ ಚೆನ್ನಾಗಿದ್ದರಿಂದ ಉತ್ತಮ ಇಳುವರಿಯನ್ನು ನಿರೀಕ್ಷಿಸಿದ್ದೇವೆ. ಆದರೆ, ಭತ್ತದ ದರ ಕುಸಿದಿದ್ದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಈ ಕುರಿತು ನ.15ರಂದು ಜಿಲ್ಲಾಧಿಕಾರಿಗಳಿಗೆ ಭೇಟಿ ಮಾಡಿ, ಜಿಲ್ಲೆಯಲ್ಲಿ ಭತ್ತ ಖರೀದಿ ಕೇಂದ್ರ ಸ್ಥಾಪಿಸುವಂತೆ ಮನವಿ ಮಾಡಿದ್ದೆವು ಎಂದರು.

ಎಪಿಎಂಸಿಯಲ್ಲಿ ಭತ್ತ, ಮೆಕ್ಕೆಜೋಳ ಖರೀದಿ ಪ್ರಕ್ರಿಯೆ ಟೆಂಡರ್ ಮೂಲಕ ನಡೆಸಬೇಕೆಂಬ ಒಕ್ಕೂಟದ ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಟಾಸ್ಕ್ ಫೋರ್ಸ್ ಸಮಿತಿ ಸಭೆ ಕರೆಯುವ ಭರವಸೆ ನೀಡಿದ್ದರು. ಮಾರನೆ ದಿನವೇ ಎಪಿಎಂಸಿಯಲ್ಲಿ ಮೆಕ್ಕೆಜೋಳ ಖರೀದಿ ವಹಿವಾಟು ಮಾಡಲು ಟೆಂಡರ್ ಪದ್ಧತಿ ಜಾರಿಗೆ ತಂದಿದ್ದಾರೆ. ಹಾಗಾಗಿ ಜಿಲ್ಲಾಧಿಕಾರಿಗಳಿಗೆ ರೈತರು ಕೃತಜ್ಞತೆ ಸಲ್ಲಿಸುತ್ತೇವೆ ಎಂದರು.

ಪ್ರತಿ ಭತ್ತದ ಧಾನ್ಯ ರಾಶಿಗೆ ಟೆಂಡರ್ ಮೂಲಕ ಖರೀದಿ ವಹಿವಾಟು ಮಾಡಬೇಕೆಂಬ ನಿಯಮವಿದ್ದರೂ ಮನಬಂದಂತೆ ಖರೀದಿ ವಹಿವಾಟು ಮಾಡಲಾಗುತ್ತಿದೆ. ಇದರಿಂದ ಖರೀದಿದಾರರು-ವ್ಯಾಪಾರಸ್ಥರು ಒಳಸಂಚು ರೂಪಿಸಿ, ಭತ್ತದ ಧಾರಣೆ ನಿಯಂತ್ರಿಸುತ್ತಿದ್ದಾರೆ. ಹಾಗಾಗಿ ನ್ಯಾಯಯುತ ಖರೀದಿ ವಹಿವಾಟು ಆಗಲು ಟೆಂಡರ್ ಪದ್ಧತಿ ಜಾರಿ ಮಾಡಬೇಕೆಂದು ಆಗ್ರಹಿಸಿದರು.

ದಲಾಲರು ದಲಾಲಿ ಪಡೆಯುವುದು, ತೂಕದಲ್ಲಿ ವಂಚಿಸುವುದು, ಹಮಾಲರು ಸ್ಯಾಂಪಲ್ ತೆಗೆದುಕೊಳ್ಳುವುದು ಸೇರಿದಂತೆ ವಿವಿಧ ರೀತಿಯಲ್ಲಿ ರೈತರನ್ನು ಶೋಷಿಸಲಾಗುತ್ತಿದೆ. ಇಂತಹ ಶೋಷಣೆ ಸಂಪೂರ್ಣ ನಿಲ್ಲಬೇಕೆಂದು ಹೇಳಿದರು.

ಎಪಿಎಂಸಿ ಪ್ರಾಂಗಣದ ಮಂಡಿಗಳಲ್ಲಿ ರೈತರು ಕುಳಿತುಕೊಳ್ಳಲು ಸೂಕ್ತ ವ್ಯವಸ್ಥೆ ಮಾಡುವುದು, ಶುದ್ಧ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದು ಸೇರಿದಂತೆ ಒಕ್ಕೂಟದ ಬೇಡಿಕೆಗಳಿಗೆ ಸ್ಪಂದಿಸುವಂತೆ ಮನವಿ ಮಾಡಿದರು.

ರೈತ ಒಕ್ಕೂಟದ ನಿಯೋಗದಲ್ಲಿ ರೈತ ಮುಖಂಡರುಗಳಾದ ಬೆಳವನೂರು ನಾಗೇಶ್ವರರಾವ್, ಲೋಕಿಕೆರೆ ನಾಗರಾಜ್, ಆಲೂರು ನಿಂಗರಾಜು, ಕರಿಲಕ್ಕೇನಳ್ಳಿ ಜಿ.ಬಿ. ಓಂಕಾರಗೌಡ್ರು, 6ನೇ ಕಲ್ಲು ವಿಜಯಕುಮಾರ್, ಶಿವನಳ್ಳಿ ರಮೇಶ್, ಹೆಚ್.ಎನ್. ಶಿವಕುಮಾರ್, ಶಿವರಾಜ ಪಾಟೀಲ್, ಹೆಚ್.ಎನ್. ಗುರುನಾಥ್, ಆರುಂಡಿ ಪುನೀತ್, ಎನ್.ಹೆಚ್. ಹಾಲೇಶ್, ಅನಿಲಕುಮಾರ್ ನಾಯ್ಕ್, ರಮೇಶನಾಯ್ಕ, ಆನೆಕೊಂಡ ರೇವಣಸಿದ್ದಪ್ಪ, ಗುಮ್ಮನೂರು ಬಸವರಾಜು, ಚಿಕ್ಕಬೂದಿಹಾಳ ಭಗತಸಿಂಹ, ಅಣಜಿ ಗುಡ್ಡೇಶ, ಹೆಬ್ಬಾಳ್ ಮಹೇಂದ್ರ, ಕುಂದುವಾಡದ ಮಹೇಶಪ್ಪ, ಜಿಮ್ಮಿ ಹನುಮಂತಪ್ಪ, ಹೊಸಹಳ್ಳಿ ಶಿವಮೂರ್ತಿ ಮತ್ತಿತರರಿದ್ದರು.

**ರೈತರ ಬೇಡಿಕೆಗೆ ಸ್ಪಂದನೆ..!**

**ಕಾರ್ಯದರ್ಶಿ ಎಚ್.ಸಿ.ಎಂ. ರಾಣಿ ಅವರು ರೈತರ ಮನವಿ ಸ್ವೀಕರಿಸಿ, ಅವರ ಬೇಡಿಕೆಗಳನ್ನು ಆಲಿಸಿದ ಬಳಿಕ ನಾಳೆಯಿಂದಲೇ ಭತ್ತ ಖರೀದಿ ವಹಿವಾಟನ್ನು ಟೆಂಡರ್ ಪದ್ಧತಿ ಮೂಲಕ ಮಾಡಲಾಗುವುದು. ರೈತರಿಗೆ ಸೂಕ್ತ ಭದ್ರತೆ ಹಾಗೂ ಮೂಲ ಸೌಕರ್ಯ ಕಲ್ಪಿಸುವ ಜತೆಗೆ ರೈತರಿಗಾಗುವ ಶೋಷಣೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದಾಗಿ ಭರವಸೆ ನೀಡಿದರು.**

# ನಗರದಲ್ಲಿ ಇಂದು ರಾಜ್ಯ ಸಹಕಾರಿ ಸಮಾವೇಶ

ಸಹಕಾರ ಭಾರತಿ ವತಿಯಿಂದ ಇಂದು ಬೆಳಿಗ್ಗೆ 11 ಕ್ಕೆ ಶಾಮನೂರು ಪಾರ್ವತಮ್ಮ ಶಿವಶಂಕರಪ್ಪ ಸಮುದಾಯ ಭವನದಲ್ಲಿ ರಾಜ್ಯ ಸಹಕಾರಿ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಹಾಸನದ ಶ್ರೀ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಂಸದ ಗೋವಿಂದ ಕಾರಜೋಳ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷ ದೀನನಾಥ್ ಠಾಕೂರ್ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಂಸದ ಡಾ.ಜಿ.ಎಂ. ಸಿದ್ದೇಶ್ವರ್, ಸಹಕಾರಿ ಭಾರತಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ.ಉದಯ ವಾಸುದೇವ್ ಜೋಶಿ, ಅಧ್ಯಕ್ಷ ಜಿ. ನಂಜನಗೌಡ ಭಾಗವಹಿಸಲಿದ್ದಾರೆ. ರಾಜ್ಯಾಧ್ಯಕ್ಷರೂ, ಮಾಜಿ ಶಾಸಕರಾದ ರಾಜಶೇಖರ್ ಶೀಲವಂತ್ ಅಧ್ಯಕ್ಷತೆ ವಹಿಸುವರು.

ಉದ್ಘಾಟನೆಗೂ ಮುನ್ನ ಅಂದು ಬೆಳಿಗ್ಗೆ 9 ಕ್ಕೆ ಸಹಕಾರಿ ಧ್ವಜಾರೋಹಣವನ್ನು ರಾಷ್ಟ್ರೀಯ ಸಂರಕ್ಷಕ್ ರಮೇಶ್ ವೈದ್ಯ ನೆರವೇರಿಸಲಿದ್ದಾರೆ. ಬೆಳಿಗ್ಗೆ 10 ಕ್ಕೆ 'ಸಹಕಾರಿ ಕ್ಷೇತ್ರದಲ್ಲಿ ಮಹಿಳೆಯರು ಮತ್ತು ಯುವಕರ ಪಾತ್ರ' ಕುರಿತು ಬೆಂಗಳೂರಿನ ಎಸ್. ಸೌಮ್ಯ ವಿಷಯ ಮಂಡಿಸಲಿದ್ದಾರೆ. ಮಧ್ಯಾಹ್ನ 12.30 ಕ್ಕೆ 'ಪಂಚ ಪರಿವರ್ತನೆ' ಕುರಿತು ಆರ್‌ಎಸ್‌ಎಸ್ ಪ್ರಕಾಶ್ ಜೀ ವಿಷಯ ಮಂಡಿಸಲಿದ್ದಾರೆ. ಮಧ್ಯಾಹ್ನ 3 ಕ್ಕೆ 'ಸಹಕಾರಿ ಸಂಘಗಳಲ್ಲಿ ಆಡಳಿತ ಮಂಡಳಿ ಜವಾಬ್ದಾರಿ' ಕುರಿತು ಸಿದ್ಧರಾಮ್ ಮೆಲೆಪ್ಪ ಕಲ್ಲೋತಿ ವಿಷಯ ಮಂಡಿಸುವರು.

ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂಜಯ್ ಪಾಚಪೂರ ಸಮಾರೋಪ ನುಡಿಗಳನ್ನಾಡಲಿದ್ದಾರೆ. ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

# ಭಾರತದ ಪ್ರಗತಿಯಲ್ಲಿ ಉಕ್ಕಿನ ಬಹು ದೊಡ್ಡ ಕೊಡುಗೆ



ಬೆಂಗಳೂರು, ನ. 21 - ಜಾಗತಿಕ ಮಟ್ಟದಲ್ಲಿ 5ನೇ ಆರ್ಥಿಕ ಶಕ್ತಿಯಾಗುವ ದಿಕ್ಕಿನಲ್ಲಿ ದಾಪುಗಾಲು ಇಟ್ಟಿರುವ ಭಾರತದ ಪ್ರಗತಿಯಲ್ಲಿ ಉಕ್ಕು ಉದ್ಯಮ ಮಹತ್ತರ ಪಾತ್ರ ನಿರ್ವಹಿಸುತ್ತಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ.

ಭಾರತೀಯ ಲೋಹ ಸಂಸ್ಥೆಯ ಲೋಹಶಾಸ್ತ್ರಜ್ಞ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ಭಾರತ ಜಗತ್ತಿನ 6ನೇ ದೈತ್ಯ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. 5ನೇ ಸ್ಥಾನಕ್ಕೇರುವ ಪ್ರಯತ್ನಕ್ಕೆ ಉಕ್ಕು ಉದ್ಯಮ ಬಹುದೊಡ್ಡ ಕೊಡುಗೆ ನೀಡುತ್ತಿದೆ ಎಂದರು.

ಭಾರತ 5 ಟ್ರಿಲಿಯನ್ ಆರ್ಥಿಕ ಶಕ್ತಿಯಾಗುವಲ್ಲಿ ಉಕ್ಕು ಕ್ಷೇತ್ರ ನಿರ್ಣಾಯಕ ಪಾತ್ರ ವಹಿಸುತ್ತಿದೆ. ರಾಷ್ಟ್ರೀಯ ಉಕ್ಕು ನೀತಿ ಉದ್ಯಮಕ್ಕೆ ಬಲ ನೀಡುತ್ತಿದೆ. ಸ್ಪೆಷಾಲಿಟಿ ಸ್ಟೀಲ್ ಉತ್ಪಾದನೆ, ಗ್ರೀನ್ ಸ್ಟೀಲ್ ತಯಾರಿಕೆಯಲ್ಲಿ ಮುಂಚೂಣಿಗೆ ಬರುವಲ್ಲಿ ಎಲ್ಲ ಅಗತ್ಯ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಉತ್ಪಾದನಾ ಸಂಪರ್ಕ ಉಪಕ್ರಮ ಸೇರಿದಂತೆ ಹಲವು ಪರಿಣಾಮಕಾರಿ ಕಾರ್ಯಕ್ರಮ ಜಾರಿ ಮಾಡಲಾಗಿದೆ. ಭಾರತದ ಉಕ್ಕು ಉದ್ಯಮ ಸಶಕ್ತವಾಗಿ ಹೊರಹೊಮ್ಮುತ್ತಿದೆ.

ಉಕ್ಕು ಕ್ಷೇತ್ರದ ಸುಸ್ಥಿರ ಹಾಗೂ ಚಲನಶೀಲ ಅಭಿವೃದ್ಧಿಗೆ ಕೇಂದ್ರ ಬದ್ಧವಾಗಿದ್ದು, ನಿರ್ದಿಷ್ಟ ಪೂರಕ ಕಾರ್ಯಸೂಚಿ ಮೇರೆಗೆ ಕೆಲಸ ಮಾಡುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚು ಪ್ರಾಮುಖ್ಯತೆ ಕೊಡುವ ಜೊತೆಗೆ ಉಕ್ಕು ಉತ್ಪಾದನೆ ಪ್ರಕ್ರಿಯೆಯಲ್ಲಿನ ವಾಯುಮಾಲಿನ್ಯವನ್ನು ಶೂನ್ಯ ಮಟ್ಟಕ್ಕೆ ತರುವ ಗುರಿ ಹೊಂದಿದ್ದು, ಗುರಿ ಸಾಧನೆ ಖಚಿತ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಜಾಗತಿಕ ಪರಿಸರ ಸಮತೋಲನದ ಹಿನ್ನೆಲೆಯಲ್ಲಿ ಸುಸ್ಥಿರ ಉಕ್ಕು ಉತ್ಪಾದನೆಗೆ ಹೈಡ್ರೋಜನ್ ಆಧಾರಿತ ತಯಾರಿಕೆ ಮತ್ತು ಮರುಬಳಕೆಗೆ ಉತ್ತೇಜಿಸಲಾಗುತ್ತಿದೆ ಎಂದರು.

# ಕಸಬ್‌ಗೂ ಸೂಕ್ತ ವಿಚಾರಣೆ ಒದಗಿಸಲಾಗಿತ್ತು

**ಸುಪ್ರೀಂ ಕೋರ್ಟ್**

ನವದೆಹಲಿ, ನ. 21 - ದೇಶದಲ್ಲಿ ಅಜ್ಮಲ್ ಕಸಬ್‌ಗೂ ಸೂಕ್ತ ವಿಚಾರಣೆ ಒದಗಿಸಲಾಗಿತ್ತು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಜಮ್ಮು ಮತ್ತು ಕಾಶ್ಮೀರದ ಪ್ರತ್ಯೇಕತಾವಾದಿ ನಾಯಕ ಯಾಸಿನ್ ಮಲಿಕ್ ವಿಚಾರಣೆಗಾಗಿ ತಿಹಾರ್ ಜೈಲಿನಲ್ಲಿ ನ್ಯಾಯಾಲಯ ಸ್ಥಾಪಿಸುವ ಇಂಗಿತ ವ್ಯಕ್ತಪಡಿಸಿದೆ.

ಮುಂಬೈ ಮೇಲೆ ನಡೆಸಲಾದ ಉಗ್ರವಾದಿ ದಾಳಿಯಲ್ಲಿ ಪಾಕಿಸ್ತಾನ ಮೂಲದ ಅಜ್ಮಲ್ ಕಸಬ್ ಪ್ರಮುಖ ಆರೋಪಿಯಾಗಿದ್ದ.

ತಿಹಾರ್ ಜೈಲಿನಲ್ಲಿ ಜೀವಾವಧಿ ಶಿಕ್ಷೆ ಎದುರಿಸುತ್ತಿರುವ ಯಾಸಿನ್ ಮಲಿಕ್‌ನನ್ನು ಅಪಹರಣ ಪ್ರಕರಣದಲ್ಲಿ ವಿಚಾರಣೆಗೆ ಹಾಜರು ಪಡಿಸುವಂತೆ ಜಮ್ಮು ನ್ಯಾಯಾಲಯವೊಂದು ಆದೇಶಿಸಿತ್ತು. ಕಾಶ್ಮೀರದ ಹಿರಿಯ ರಾಜಕಾರಣಿ ಮುಫ್ತಿ ಮೊಹಮ್ಮದ್ ಸಯೀದ್ ಅವರ ಪುತ್ರಿ ರುಬಯ್ಯ ಸಯೀದ್ ಅಪಹರಿಸಿದ ಆರೋಪ ಮಲಿಕ್ ಮೇಲಿದೆ.

ಜಮ್ಮು ನ್ಯಾಯಾಲಯದ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಿಬಿಐ ಅರ್ಜಿ ದಾಖಲಿಸಿದೆ. ಈ ಬಗ್ಗೆ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಹಾಗೂ ಆಗಸ್ಟೀನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸುತ್ತಿದೆ.

ಆನ್‌ಲೈನ್ ಮೂಲಕ ವಾದ - ಪ್ರತಿವಾದ ನಡೆಸಲು ಹೇಗೆ ಸಾಧ್ಯ? ನಮ್ಮ ದೇಶ ಅಜ್ಮಲ್ ಕಸಬ್‌ಗೂ ನ್ಯಾಯೋಚಿತ ವಿಚಾರಣೆ ಒದಗಿಸಿತ್ತು. ಹೈಕೋರ್ಟ್ ಆತನಿಗೆ ಕಾನೂನು ನೆರವು ಒದಗಿಸಿತ್ತು ಎಂದು ಪೀಠ ಹೇಳಿದೆ.

ಪೀಠದ ಎದುರು ಸಿಬಿಐ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತ, ಭದ್ರತಾ ಕಾರಣಗಳಿಂದಾಗಿ ಯಾಸಿನ್ ಮಲಿಕ್‌ನನ್ನು ಜಮ್ಮುವಿಗೆ ವಿಚಾರಣೆಗೆ ಕರೆದೊಯ್ಯಲಾಗದು ಎಂದರು.

ಜೈಲಿನ ಒಳಗೆ ನ್ಯಾಯಾಲಯ ಸ್ಥಾಪಿಸಲು ಆದೇಶ ಹೊರಡಿಸಬಹುದು. ನ್ಯಾಯಾಧೀಶರು ವಿಚಾರಣೆಗಾಗಿ ಜೈಲಿಗೆ ಬರಬಹುದು.

ಆದರೆ, ಈ ಬಗ್ಗೆ ಆದೇಶ ಹೊರಡಿಸುವುದಕ್ಕೆ ಮುಂಚೆ ಆರೋಪಿಯ ವಾದ ಕೇಳಬೇಕಾಗುತ್ತದೆ ಎಂದು ಪೀಠ ತಿಳಿಸಿದೆ. ನ್ಯಾಯಾಲಯ ಮುಂದಿನ ವಿಚಾರ ಣೆಯನ್ನು ನವೆಂಬರ್ 28ಕ್ಕೆ ನಿಗದಿ ಪಡಿಸಿದೆ.

## ಕದಳಿ ಮಹಿಳಾ ವೇದಿಕೆಯಿಂದ ಪ್ರಬಂಧ ಸ್ಪರ್ಧೆ : ಸದಸ್ಯರಿಂದ ಆಹ್ವಾನ

ದಾವಣಗೆರೆ, ನ. 21 - ಕದಳಿ ಮಹಿಳಾ ವೇದಿಕೆಯ ವಾರ್ಷಿಕೋತ್ಸವದ ಪ್ರಯುಕ್ತ, ದಾವಣಗೆರೆ ಜಿಲ್ಲೆಯ ಸಾರ್ವಜನಿಕ ಮಹಿಳೆಯರಿಗೆ ಹಾಗೂ ನಮ್ಮ ಕದಳಿ ಮಹಿಳಾ ವೇದಿಕೆಯ ಸದಸ್ಯ ರಿಗೆ ಪ್ರಬಂಧ ಸ್ಪರ್ಧೆ ನಡೆಯಲಿದೆ.

ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ ವಿಷಯದ ಮೇಲೆ ಪ್ರಬಂಧ ಬರೆಯಲು ಆಸಕ್ತಿ ಇರುವ ವರು ಪುಟದ ಒಂದೇ ಮಗ್ಗುಲಲ್ಲಿ, ನಾಲ್ಕು ಪುಟಗಳಿಗೆ ಮೀರದಂತೆ ಬರೆದು ಗಾಯತ್ರಿ ವಸ್ತ್ರದ್, ಮನೆ ನಂಬರ್ 2002/3, ಎಂ.ಸಿ.ಸಿ.'ಎ' ಬ್ಲಾಕ್, ದಾವಣಗೆರೆ -4 99869 83277 ಅಥವಾ ಮಮತಾ ನಾಗ ರಾಜ್, ಶ್ರೀಗಂಧ, 10ನೇ ಕ್ರಾಸ್, ಆಂಜನೇಯ ಬಡಾವಣೆ, 99648 29122 ಇಲ್ಲಿಗೆ ಇದೇ ದಿನಾಂಕ 30ರೊಳಗೆ ಕಳುಹಿಸಬಹುದಾಗಿದೆ.

## ಹರಪನಹಳ್ಳಿಯಲ್ಲಿ 27ಕ್ಕೆ ಸಂಸ್ಕೃತಿ ಉತ್ಸವ

ಹರಪನಹಳ್ಳಿ, ನ. 21 - ಅಂಬ್ಲಿ ದೊಡ್ಡಭರಮಪ್ಪ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೇಡಂ ಶ್ರೀ ಕೊತ್ತಲ ಬಸವೇಶ್ವರ ಶಿಕ್ಷಣ ಸಮಿತಿಯಿಂದ 7ನೇ ಭಾರತೀಯ ಸಂಸ್ಕೃತಿ ಉತ್ಸವವು ಇದೇ ದಿನಾಂಕ 27ರ ಬುಧವಾರ ನಡೆಯಲಿದೆ.

ವೀರಶೈವ ವಿದ್ಯಾವರ್ಧಕ ಸಂಘದ ಸಹಯೋಗದಲ್ಲಿ ಅಂದು ಬೆಳಿಗ್ಗೆ 11ಕ್ಕೆ ಆರಂಭವಾಗುವ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಮಹೇಶ್ ಮಾಶಾಳ್ ಉಪನ್ಯಾಸ ನೀಡುವರು.

**WANTED SUPERVISOR**
Qualification : Any General Degree
*Minimum 1 year experience in event management.*
*Age : 25 to 40 Years.*
**Timing : Morning 9 to evening 8**
Good communication skills
**Mob : 99012 83135**

# ವಕ್ಫ್ ಸಮಸ್ಯೆ ಪರಿಹಾರಕ್ಕಾಗಿ ಇಂದು 'ನಮ್ಮ ಭೂಮಿ-ನಮ್ಮ ಹಕ್ಕು' ಆಂದೋಲನ

ದಾವಣಗೆರೆ, ನ.21- ವಕ್ಫ್ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಜಿಲ್ಲಾ ಬಿಜೆಪಿ ವತಿಯಿಂದ ನಾಳೆ ದಿನಾಂಕ 22ರ ಶುಕ್ರವಾರ ನಗರದ ಉಪವಿಭಾಗಾಧಿಕಾರಿ ಕಚೇರಿ ಎದುರು ನಮ್ಮ ಭೂಮಿ- ನಮ್ಮ ಹಕ್ಕು ಶೀರ್ಷಿಕೆಯಡಿ ಜನಜಾಗೃತಿ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾ ಮಾಧ್ಯಮ ವಕ್ತಾರ ಬಿ.ಎಂ.ಸತೀಶ್ ಕೊಳೇನಹಳ್ಳಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಆಂದೋಲನದ ಜೊತೆಗೆ ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಈಗಾಗಲೇ ಬಿಜೆಪಿ ರಾಜ್ಯಾಧ್ಯಕ್ಷರು ವಕ್ಫ್ ಬಾಧಿತ ಜನರ ಸಮಸ್ಯೆ ಆಲಿಸಲು ಮೂರು ತಂಡಗಳನ್ನು ಪ್ರಕಟಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆ, ಹೋಬಳಿ, ಪಂಚಾಯಿತಿ ಮಟ್ಟದಲ್ಲಿ ವಕ್ಫ್ ಸಮಸ್ಯೆಗಳನ್ನು ಆಲಿಸುತ್ತಿದ್ದೇವೆ. ನಾಳೆ ದಿನಾಂಕ 22ರ ಶುಕ್ರವಾರ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಶೋಷಣೆಗೆ ಒಳಗಾದ ಜನರನ್ನು ಬರಮಾಡಿಕೊಂಡು ಅಹವಾಲು ಸ್ವೀಕರಿಸುತ್ತೇವೆ. ಈ ಮೂಲಕ ಸಮಸ್ಯೆಯ ಗಂಭೀರತೆಯನ್ನು ಜಿಲ್ಲಾವಾರು ಪರಾಮರ್ಶೆ ಮಾಡುತ್ತೇವೆ ಎಂದರು.

ವಕ್ಫ್ ಆಸ್ತಿ ಸಂಬಂಧ ಇಡೀ ರಾಜ್ಯದಲ್ಲಿ ಎದುರಾಗಿರುವ ಸಮಸ್ಯೆಗೆ ತಾರ್ಕಿಕ ಅಂತ್ಯ ಹುಡುಕುವ ನಿಟ್ಟಿನಲ್ಲಿ ಪ್ರತಿ ಜಿಲ್ಲೆಯಲ್ಲೂ ಓರ್ವ ವಕೀಲರನ್ನು ಒಳಗೊಂಡ 5 ಜನರ ತಂಡ ರಚಿಸಲಾಗಿದೆ. ಕಾನೂನಾತ್ಮಕ ಹೋರಾಟಕ್ಕೆ ಶಕ್ತಿ ತುಂಬುವ ಸಲುವಾಗಿ ಈ ತಂಡ ರಚಿಸಿದ್ದು, ಪ್ರತಿ ಜಿಲ್ಲೆಯಲ್ಲಿ ಮಠಾಧೀಶರೂ ಸೇರಿದಂತೆ ಜಿಲ್ಲೆಯ ಪ್ರಮುಖ ವ್ಯಕ್ತಿಗಳನ್ನು ಒಳಗೊಂಡಂತೆ ಎಲ್ಲರನ್ನೂ ಭೇಟಿ ಮಾಡುವ ಮೂಲಕ ಜನಜಾಗೃತಿ ಮೂಡಿಸುತ್ತಿದ್ದೇವೆ. ಆಯಾ ಜಿಲ್ಲೆಗೆ ನಿಗದಿಪಡಿಸಿದ ದಿನಾಂಕದಂದು ಹೋರಾಟದಲ್ಲಿ ಪಕ್ಷದ ನಾಯಕರು, ಮಠಾಧೀಶರು, ರೈತ ಮುಖಂಡರು, ಸೆಲೆಬ್ರಿಟಿಗಳು, ಸಮಾಜದ ಗಣ್ಯರು ಭಾಗವಹಿಸಲಿದ್ದಾರೆ. ರೈತರು ಹಾಗೂ ಸಾರ್ವಜನಿಕರು ತಪ್ಪದೇ ತಮ್ಮ ಜಾಗದ ಪಹಣಿಯನ್ನು ಪರೀಕ್ಷಿಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದ ಮೂರು ತಂಡಗಳು ಡಿಸೆಂಬರ್ ಮೊದಲ ವಾರದಿಂದ ರಾಜ್ಯಾದ್ಯಂತ ಪ್ರತಿ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿವೆ. ನ.28ರಂದು ಛಲವಾದಿ ನಾರಾಯಣಸ್ವಾಮಿ ನೇತೃತ್ವದ ತಂಡವು ದಾವಣಗೆರೆ ಜಿಲ್ಲೆಗೆ ಆಗಮಿಸಲಿದೆ. ರೈತರು, ಮಠಮಾನ್ಯಗಳು ಮತ್ತು ಸಾರ್ವಜನಿಕರ ಸಮಸ್ಯೆಯನ್ನು ಆಲಿಸಲಿದೆ. ಎಲ್ಲ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನೈಜ ವರದಿಯನ್ನು ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇವೆ ಎಂದು ಹೇಳಿದರು.

ಕೇಂದ್ರದ ಮೂವರು ಸಚಿವರು, ಮಾಜಿ ಮುಖ್ಯಮಂತ್ರಿಗಳಾದ ಡಿ.ವಿ.ಸದಾನಂದಗೌಡ, ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್ ಸೇರಿದಂತೆ ಪ್ರಮುಖ ನಾಯಕರು ಇರುವ ಪ್ರತಿ ತಂಡವು ಕನಿಷ್ಠ 8-10 ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿದೆ. ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಸದನದಲ್ಲಿ ವಾಸ್ತವಿಕ ಸಮಸ್ಯೆಗಳ ಕಡೆ ಬೆಳಕು ಚೆಲ್ಲಲಿದೆ. ಆನಂತರ 50-60 ಸಾವಿರ ಸಾರ್ವಜನಿಕರು, ರೈತರನ್ನು ಸೇರಿಸಿ ಪಕ್ಷದ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಬೆಳಗಾವಿ ಅಧಿವೇಶನದ ವೇಳೆ ಬೃಹತ್ ಪ್ರತಿಭಟನೆ ಆಯೋಜಿಸುತ್ತೇವೆ ಎಂದು ಅವರು ವಿವರಿಸಿದರು.

ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಮಾತನಾಡಿ, ವಕ್ಫ್ ಮಂಡಳಿ ನೀಡಿದ ನೋಟಿಸ್ ರದ್ದು ಮಾಡುತ್ತೇವೆ ಎಂಬ ಕಾಂಗ್ರೆಸ್ಸಿಗರ ಬಾಯಿಮಾತಿನ ಸಾಂತ್ವನದಿಂದ ಪ್ರಯೋಜನವಿಲ್ಲ. ಜನರಿಗೆ ಆಸ್ತಿ ಪರಭಾರೆ, ಮಾರಾಟ ಮಾಡುವಾಗ, ಬ್ಯಾಂಕ್ ಸಾಲ ಬೇಕಾದಾಗ ಏನು ಮಾಡಬೇಕು? ಜನರ ಕಷ್ಟಕ್ಕೆ ಕಾಂಗ್ರೆಸ್ಸಿಗರು, ಅಧಿಕಾರಿಗಳು ನೆರವಿಗೆ ಬರುವುದಿಲ್ಲ ಆದ್ದರಿಂದ ಸಚಿವ ಸಂಪುಟದಲ್ಲಿ ತೀರ್ಮಾನವಾಗಬೇಕು ಎಂದರು.

ಮುಖಂಡ ಬಿ.ಜೆ.ಅಜಯ್ ಕುಮಾರ್ ಮಾತನಾಡಿ, ಅಧಿಕಾರಿಗಳ ಕಣ್ತಪ್ಪಿನಿಂದ ಪಿ.ಜೆ ಬಡಾವಣೆಯ ಆಸ್ತಿ ದಾಖಲೆಗಳಲ್ಲಿ ವಕ್ಫ್ ಹೆಸರು ನಮೂದಾಗಿದ್ದು, ಇನ್ನು 2-3 ದಿನಗಳಲ್ಲಿ ಸಮಸ್ಯೆ ಪರಿಹಾರವಾಗಲಿದೆ ಎಂಬ ತಹಶೀಲ್ದಾರ್ ಭರವಸೆ ಇನ್ನೂ ಈಡೇರಿಲ್ಲ. ಜನರಿಗೆ ಕಾನೂನುಬದ್ಧವಾಗಿ ನ್ಯಾಯ ಕೊಡಿಸಲು ನಾವು ಬದ್ಧರಾಗಿದ್ದು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸ್ವಯಂಪ್ರೇರಿತ ಮೊಕದ್ದಮೆ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್ ನಾಯ್ಕ, ಮುಖಂಡರಾದ ಕೊಟ್ರೇಶ ಗೌಡ, ಹೆಚ್.ಪಿ.ವಿಶ್ವಾಸ್, ಹೆಚ್.ಬಿ.ನವೀನ ಕುಮಾರ ಸುದ್ದಿಗೋಷ್ಠಿಯಲ್ಲಿದ್ದರು.

## ಸ್ನಾತ ಕೋತ್ತರ ಪದವಿ ಹಾಗೂ ಪಿಹೆಚ್‌ಡಿ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ನ. 21 - ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪಿಹೆಚ್‌ಡಿ ಮಾಡುವ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಹಾಗೂ 3ಬಿ ವರ್ಗಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ ಡಿ. ದೇವರಾಜು ಅರಸು ವಿದೇಶಿ ವ್ಯಾಸಂಗ ವೇತನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವೆಬ್‌ಸೈಟ್ http://bcwd.karnataka.gov.in ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿಯನ್ನು ಸಲ್ಲಿಸಲು ಡಿಸೆಂಬರ್ 5 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ 8050770004 ಸಹಾಯವಾಣಿ ಸಂಪರ್ಕಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಕೆ.ಹೆಚ್ ಗಾಯತ್ರಿ ತಿಳಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ಮಹಾಲಕ್ಷ್ಮಿದೇವಿ ಕಾರ್ತಿಕೋತ್ಸವ

ಸಂಗಮ ಚಿತ್ರಮಂದಿರದ ಹಿಂಭಾದಲ್ಲಿರುವ ಮಹಾಲಕ್ಷ್ಮಿ ದೇವಸ್ಥಾನದ ಕಾರ್ತಿಕೋತ್ಸವ ಇಂದು ನಡೆಯುತ್ತದೆ. ಸಂಜೆ 5 ಗಂಟೆಗೆ ಮಹಾಲಕ್ಷ್ಮಿ ದೇವಿಯ ಉತ್ಸವ ಮೂರ್ತಿ ಹಾಗೂ ಬಣಗಾರ ಸಮಾಜದ ಆದಿ ಗುರು ಶಂಕರಾಚಾರ್ಯರು ಮತ್ತು ದಾಸಿಮಯ್ಯನವರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ನಂತರ ತುಳಜಾ ಭವಾನಿ ದೇವಸ್ಥಾನದ ಮಹಿಳಾ ಮಂಡಳಿಯಿಂದ ಲಲಿತಾ ಸಹಸ್ರ ನಾಮಾವಳಿ ಪಠಣವು ನಡೆಸಿಕೊಡುವರು. ರಾತ್ರಿ 7.30ಕ್ಕೆ ಮಹಾಲಕ್ಷ್ಮಿ ಮತ್ತು ನವಗ್ರಹ ಮೂರ್ತಿಗಳಿಗೆ ಪೂಜೆ ಸಲ್ಲಿಸಿ ಮಹಾಮಂಗಳಾರತಿ ಮಾಡಲಾಗುವುದು. ನಂತರ ಕಾರ್ತಿಕ ದೀಪೋತ್ಸವ ಹಚ್ಚಲಾಗುವುದು. ನಂತರ ಅನ್ನ ಸಂತರ್ಪಣೆ ನಡೆಯುತ್ತದೆ.

## ಕೀನ್ಯಾ : ಅದಾನಿ ಸಮೂಹದ ವಿಮಾನ ನಿಲ್ದಾಣ, ವಿದ್ಯುತ್ ಒಪ್ಪಂದ ರದ್ದು

ನೈರೋಬಿ, ನ. 21 – ಉದ್ಯಮಿ ಗೌತಮ್ ಅದಾನಿ ಸಮೂಹದ ಜೊತೆಗಿನ ವಿಮಾನ ನಿಲ್ದಾಣ ವಿಸ್ತರಣೆ ಹಾಗೂ ಇಂಧನ ಒಪ್ಪಂದಗಳನ್ನು ರದ್ದುಗೊಳಿಸುವುದಾಗಿ ಕೀನ್ಯಾ ಅಧ್ಯಕ್ಷ ವಿಲಿಯಂ ರುಟೋ ಘೋಷಿಸಿದ್ದಾರೆ.

ಅಮೆರಿಕದ ತನಿಖಾ ಸಂಸ್ಥೆಗಳು ಅದಾನಿ ವಿರುದ್ಧ ಗಂಭೀರ ಆರೋಪ ದಾಖಲಿಸಿರುವ ನಡುವೆಯೇ ಈ ಬೆಳವಣಿಗೆಯಾಗಿದೆ.

ಕೀನ್ಯಾದ ರಾಜಧಾನಿಯಲ್ಲಿರುವ ಮುಖ್ಯ ವಿಮಾನ ನಿಲ್ದಾಣವನ್ನು ಆಧುನೀಕರಣಗೊಳಿಸುವ ಕಾಮಗಾರಿಗಾಗಿ ಕೀನ್ಯಾ ಜೊತೆ ಅದಾನಿ ಸಮೂಹ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದದ ವಿರುದ್ಧ ಕೀನ್ಯಾದಲ್ಲಿ ಟೀಕೆ ಕೇಳಿ ಬಂದಿತ್ತು ಹಾಗೂ ಪ್ರತಿಭಟನೆಗಳೂ ಎದುರಾಗಿದ್ದವು. ಕೀನ್ಯಾದ ವಿದ್ಯುತ್ ಪೂರೈಕೆ ಜಾಲದ ನಿರ್ಮಾಣದ ಗುತ್ತಿಗೆಯನ್ನೂ ಅದಾನಿ ಸಮೂಹ ಪಡೆದುಕೊಂಡಿತ್ತು.

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ಲಕ್ಷ್ಮಿದೇವಿ ಟಿ ಕೋಂ ಕೆ. ತಿಪ್ಪೇಸ್ವಾಮಿ, ವಾಸ ಬಂಬೂಬಜಾರ್ ಹತ್ತಿರ, ದಾವಣಗೆರೆ ಶ್ರೀಮತಿ ಹೆಚ್. ಸೌಭಾಗ್ಯಮ್ಮ ಕೋಂ ಜಿ. ಹಿರಿಯಣ್ಣ ವಾಸ : ಕೆ.ಬಿ. ಬಡಾವಣೆ, ದಾವಣಗೆರೆ ಶ್ರೀಮತಿ ಚನ್ನಮ್ಮ ಕೋಂ ಸುರೇಶ್ ಎಲ್.ಡಿ. ವಾಸ : ಬುದ್ಧಬಸವ ನಗರ, ದಾವಣಗೆರೆ, ಆದ ಇವರುಗಳು ನೀಡುವ ಸಾರ್ವಜನಿಕ ತಿಳುವಳಿಕೆ ಏನೆಂದರೆ :

ಈ ಮೇಲ್ಕಾಣಿಸಿದ ಶ್ರೀಮತಿ ಲಕ್ಷ್ಮಿ ದೇವಿ ಟಿ. ಆದ ಇವರು ದಿನಾಂಕ : 31.12.1997 ರಂದು ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಈ ಹಿಂದೆ ಯರಗುಂಟೆ ಗ್ರಾಮ ಪಂಚಾಯಿತಿಗೆ ಸೇರಿದ ದೊಡ್ಡಬೂದಿಹಾಳು ಗ್ರಾಮದ ರೀ. ಸರ್ವೆ ನಂ: 70/3 ರಲ್ಲಿ ಹಾಲಿ 70/8 ವಿಸ್ತೀರ್ಣ 37 ಗುಂಟೆ ಜಮೀನಿನಲ್ಲಿ ವಿಂಗಡಿಸಿರುವ ಸೈಟುಗಳಲ್ಲಿ ಆಸ್ತಿ ನಂ : 72/2 ಖಾತೆ ನಂ : 100 / ಎ ಸೈಟ್ ನಂ : 21 ಹಾಗೂ ಸೈಟ್ ನಂ : 22 ತಲಾ ಸೈಟುಗಳ ಅಳತೆ 15 X 40 ಅಡಿಗಳ ಮಾಲೀಕರು ಮತ್ತು ಸ್ವಾಧೀನಾನುಭವದಾರರೂ ಇರುತ್ತಾರೆ. ಅದೇ ರೀತಿ ಶ್ರೀಮತಿ ಸೌಭಾಗ್ಯಮ್ಮ ಇವರು ದಿನಾಂಕ : 30.03.1998 ರಂದು ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಈ ಹಿಂದೆ ಯರಗುಂಟೆ ಗ್ರಾಮ ಪಂಚಾಯಿತಿಗೆ ಸೇರಿದ ದೊಡ್ಡಬೂದಿಹಾಳು ಗ್ರಾಮದ ರೀ. ಸರ್ವೆ ನಂ : 70/3 ಹಾಲಿ 70/8 ರಲ್ಲಿ ವಿಂಗಡಿಸಿರುವ ಸೈಟುಗಳಲ್ಲಿ ಆಸ್ತಿ ನಂ : 72/2, ಖಾತೆ ನಂ : 100/ಎ ಸೈಟ್ ನಂ : 30 ಅಳತೆ 15X40 ಅಡಿಗಳ ಮಾಲೀಕರು ಮತ್ತು ಸ್ವಾಧೀನಾನುಭವ ದಾರರೂ ಇರುತ್ತಾರೆ. ಅದೇ ರೀತಿ ಶ್ರೀಮತಿ ಚನ್ನಮ್ಮ ಇವರು ದಿನಾಂಕ : 21.12.2016 ರಂದು ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಈ ಹಿಂದೆ ಯರಗುಂಟೆ ಗ್ರಾಮ ಪಂಚಾಯಿತಿಗೆ ಸೇರಿದ ದೊಡ್ಡಬೂದಿಹಾಳು ಗ್ರಾಮದ ರೀ. ಸರ್ವೆ ನಂ: 70/3 ಹಾಲಿ 70/8 ರಲ್ಲಿ ವಿಂಗಡಿಸಿರುವ ಸೈಟುಗಳಲ್ಲಿ ಆಸ್ತಿ ನಂ : 72/2, ಖಾತೆ ನಂ: 100/ಎ ಸೈಟ್ ನಂ: 43 ಅಳತೆ 15X40 ಅಡಿಗಳ ಮಾಲೀಕರು ಮತ್ತು ಸ್ವಾಧೀನಾನುಭವದಾರರೂ ಇರುತ್ತಾರೆ. ಸದರಿ ಕ್ರಯ ಪತ್ರಗಳ ಆಧಾರದ ಮೇಲೆ ಮಹಾನಗರ ಪಾಲಿಕೆ ದಾವಣಗೆರೆ ಇವರಲ್ಲಿ ಖಾತೆ ಹಿಂಬರಹಗಳು ಮತ್ತು ಇ-ಸ್ವತ್ತುಗಳು ಆಗಿರುತ್ತವೆ. ಇತ್ತೀಚೆಗೆ ಈ ಮೇಲೆ ತಿಳಿಸಿದ ರೀ. ಸರ್ವೆ ನಂಬರಿಗೆ ಸಂಬಂಧಿಸಿದಂತೆ ಕೆಲವು ವ್ಯಕ್ತಿಗಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಬೇರೊಬ್ಬರಿಗೆ ಮಾರಾಟ ಮಾಡುವ ಹುನ್ನಾರ ನಡೆಸಿರುತ್ತಾರೆಂದು ತಿಳಿದು ಬಂದಿರುತ್ತದೆ. ಈ ಹಿಂದೆಯೇ ಸದರಿ ರೀ. ಸರ್ವೆ ನಂಬರಿಗೆ ಸಂಬಂಧಿಸಿದಂತೆ ಆಗಿನ ಮಾಲೀಕರು ಕೆ.ನಾರಾಯಣ ಬಿನ್ ಶ್ರೀನಿವಾಸ ಹಾಗೂ ಕೆ.ಶ್ರೀನಿವಾಸ ಬಿನ್ ತಿಮ್ಮಪ್ಪ ಇವರುಗಳಿಗೆ ಮಾಡಿಕೊಟ್ಟಿರುವ ಅಧಿಕಾರ ಪತ್ರದ (ಜಿ.ಪಿ.ಎ) ಆಧಾರದ ಮೇಲೆ ಕ್ರಯ ಪತ್ರಗಳು ಆಗಿರುತ್ತವೆ. ಕಾರಣ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ, ಈ ಮೇಲ್ಕಾಣಿಸಿದ ದೊಡ್ಡ ಬೂದಿಹಾಳು ರೀ. ಸರ್ವೆ ನಂಬರ್ 70/3 ಈಗ ರೀ. ಸರ್ವೆ ನಂ : 70/8 ಎಂದು ನಮೂದಾಗಿರುವ ವಿಸ್ತೀರ್ಣ 37 ಗುಂಟೆ ಜಮೀನಿನಲ್ಲಿ ವಿಂಗಡಿಸಿರುವ ಸೈಟುಗಳ ಬಗ್ಗೆ ಯಾರಾದರೂ ವ್ಯವಹಾರ ಮಾಡಿಕೊಂಡು ದಾಖಲೆಗಳನ್ನು ಸೃಷ್ಟಿಸಿದಲ್ಲಿ ಅಂಥವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ ಅಂತಾ ಮತ್ತು ಅಂತಹ ದಾಖಲೆಗಳು ನಮ್ಮ ಕಕ್ಷಿದಾರರಿಗೆ ಬಂಧನಕಾರಿಯಾಗುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ಈ ಪ್ರಕಟಣೆ ಮೂಲಕ ತಿಳುವಳಿಕೆ ನೀಡಲಾಗಿದೆ.

ದಾವಣಗೆರೆ,
ದಿನಾಂಕ :22-11-2014

**(ಚಮನ್ ಸಾಬ್ ಅಂಗಡಿ)** ಬಿ.ಕಾಂ, ಎಲ್‌ಎಲ್‌ಬಿ, ವಕೀಲರು,
ಮುಸ್ಲಿಂ ಹಾಸ್ಟೆಲ್ ಕಾಂಪ್ಲೆಕ್ಸ್, ಮಿರ್ಜಾ ಇಸ್ಮಾಯಿಲ್ ರೋಡ್, ಪಿ.ಜೆ.
ಬಡಾವಣೆ, ದಾವಣಗೆರೆ ಮೊ : **98443 11139**

# ತಕ್ಷಣವೇ ಗುಂಡಿಗಳ ಮುಚ್ಚಿಸಲು ಮೇಯರ್ ತಾಕೀತು



## ಪೌರ ಕಾರ್ಮಿಕರ ಸಮಸ್ಯೆ, ಪಕ್ಷ-ಭೇದ ಮರೆತು ಪ್ರಸ್ತಾಪ

ಸದಸ್ಯ ಶಿವಪ್ರಕಾಶ್, ವಾರ್ಡ್‌ನಲ್ಲಿ ಪೌರ ಕಾರ್ಮಿಕರ ಕೊರತೆ ಇದೆ. ಇದ್ದವರೂ ಹೆಚ್ಚು ದಿನ ರಜೆ ಮಾಡುತ್ತಿದ್ದಾರೆ. ಇದರಿಂದ ಅನಾನುಕೂಲವಾಗುತ್ತಿದೆ ಎಂದರು. ಇದಕ್ಕೆ ಸದಸ್ಯರು ಪಕ್ಷ ಭೇದ ಮರೆತು ಸಹಮತ ವ್ಯಕ್ತಪಡಿಸಿದರು.

ಆಯುಕ್ತರಾದ ರೇಣುಕಾ ಮಾತನಾಡಿ, ಪ್ರಸ್ತುತ ಪಾಲಿಕೆಯಲ್ಲಿ 419 ಜನ ಪೌರ ಕಾರ್ಮಿಕರಿದ್ದು, ಈ ಪೈಕಿ ಹಲವಾರು ಕಾರಣಗಳಿಂದಾಗಿ ಶೇ.20ರಷ್ಟು ಜನರಿಗೆ ಕೆಲಸ ಮಾಡಲು ಶಕ್ತಿ ಇಲ್ಲ. ಪದೇ ಪದೇ ರಜೆ ಹಾಕುವವರಿಗೆ ಎಚ್ಚರಿಕೆಯನ್ನೂ ನೀಡಲಾಗಿದೆ ಎಂದರು. ಈಗಾಗಲೇ ನೇಮಕಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮತಿ ನೀಡುವುದಾಗಿ ಹೇಳಿದ್ದಾರೆ. ಅಲ್ಲಿವರೆಗೂ ಒಂದು ವಾರ್ಡ್‌ನಿಂದ ಮತ್ತೊಂದು ವರ್ಡ್‌ಗೆ ಶಿಫ್ಟ್ ಮಾಡುವ ಕೆಲಸ ನಡೆಯುತ್ತಿದೆ. ಸದಸ್ಯರು ಸಹಕರಿಸಬೇಕಿದೆ ಎಂದು ಹೇಳಿದರು.

ಮಾಜಿ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಜನಸಂಖ್ಯೆಗನುಗುಣವಾಗಿ ಪೌರ ಕಾರ್ಮಿಕರ ಅಗತ್ಯವಿದೆ. ಪ್ರಸ್ತಾವನೆ ಸಲ್ಲಿಸಿದ್ದೀರಿ. ನೇಮಕಾತಿ ತಡವಾಗಬಹುದು. ಆದರೆ ಸದ್ಯ ಇರುವವರು ಎಷ್ಟು ಜನ? ಎಷ್ಟು ಗಂಟೆ ಕೆಲಸ ಮಾಡುತ್ತಿದ್ದಾರೆ? ಹೇಗೆ ಬಳಸಿಕೊಳ್ಳಬಹುದು ಎಂದು ಚಿಂತಿಸಿ ತಾತ್ಕಾಲಿಕವಾಗಿ ಪರಿಹಾರ ಕಂಡುಕೊಳ್ಳಬೇಕಿದೆ ಎಂದರು.

## ಪೇಪರ್ ಎಲ್ಲೋಯ್ತು ? ಅಲ್ಲೆಂಗೋಯ್ತು ?

ಸಭೆಯಲ್ಲಿ 'ಜನತವಾಣಿ' ಪತ್ರಿಕೆ ಪ್ರದರ್ಶಿಸಿ ಗುಂಡಿ ಸಮಸ್ಯೆ ಬಗ್ಗೆ ವಿಪಕ್ಷ ನಾಯಕ ಪ್ರಸನ್ನ ಕುಮಾರ್ ಮಾತನಾಡಿದರು. ತುಸು ಸಮಯದ ನಂತರ ಅದೇ ಪತ್ರಿಕೆ ಎ.ನಾಗರಾಜ್ ಅವರ ಕೈ ಸೇರಿತ್ತು. ಇದರಿಂದ ಸಿಡಿಮಿಡಿಗೊಂಡ ಪ್ರಸನ್ನ ಕುಮಾರ್, ನನ್ನ ಟೇಬಲ್ ಮೇಲಿದ್ದ ಪತ್ರಿಕೆ ಅವರ ಕೈ ಸೇರಿದ್ದು ಹೇಗೆ? ಯಾರು ಕೊಟ್ಟರು? ತನಿಖೆ ಮಾಡಿ, ಕೊಟ್ಟವರ ಮೇಲೆ ಕ್ರಮವಾಗಲಿ ಎಂದು ಆಗ್ರಹಿಸಿದರು.

## ರಾಜ್ಯೋತ್ಸವದಲ್ಲಿ ಕುಸ್ತಿ ಪಂದ್ಯ ಆಯೋಜಿಸಿ

ಪಾಲಿಕೆಯಿಂದ ನಾಡ ಹಬ್ಬ ರಾಜ್ಯೋತ್ಸವ ಆಚರಣೆ ವೇಳೆ 50 ಲಕ್ಷ ರೂ. ಖರ್ಚು ಮಾಡಲಾಗುತ್ತದೆ. ನಶಿಸಿ ಹೋಗುತ್ತಿರುವ ಕುಸ್ತಿ ಕ್ರೀಡೆಯನ್ನೂ ಉಳಿಸಿ ಬೆಳಸಬೇಕಾಗಿದ್ದು, ಇದಕ್ಕಾಗಿ ಹಣ ಮೀಸಲಿಡುವಂತೆ ಸದಸ್ಯ ಕೆ.ಎಂ. ವೀರೇಶ್ ಸಭೆಯಲ್ಲಿ ಪ್ರಸ್ತಾಪಿಸಿದರು. ರಾಜ್ಯೋತ್ಸವದ ಅಂಗವಾಗಿ ಈ ಹಿಂದೆಲ್ಲಾ ಕುಸ್ತಿ ಪಂದ್ಯ ಆಯೋಜಿಸಲಾಗುತ್ತಿತ್ತು. ಮುಂದೆಯೂ ಆಯೋಜಿಸುವಂತೆ ಹೇಳಿದರು.

(1ನೇ ಪುಟದಿಂದ) ಯಾಗಿತ್ತು. ಈಗ ಮತ್ತೆ ಶುರುವಾಗಿದೆ. ನಾಯಿ ಕಾಟವೂ ಅತಿಯಾಗಿದೆ. ಈ ಕುರಿತು ತಕ್ಷಣ ಕ್ರಮವಹಿಸಬೇ ಕಾಗಿದೆ. ನಾಯಿಗಳನ್ನು ಹಿಡಿಯವ ಮೊದಲು ಸಾರ್ವಜನಿಕರಿಗೆ ಸಾಕು ನಾಯಿಗಳನ್ನು ಮನೆ ಕಾಂಪೌಂಡ್ ಒಳಗೆ ಇಟ್ಟು ಕೊಳ್ಳುವಂತೆಯೂ ಸೂಚನೆ ನೀಡಬೇಕು ಎಂದರು. ಪ್ರತಿಪಕ್ಷದ ನಾಯಕ ಪ್ರಸನ್ನಕುಮಾರ್ ಮಾತನಾಡಿ, ಬೀದಿ ನಾಯಿಗಳಿಗೆ ಆಹಾರ ಹಾಕುವವರಿಗೂ ತಿಳಿ ಹೇಳಬೇಕಿದೆ ಎಂದರು.

ಆರೋಗ್ಯ ನಿರೀಕ್ಷಕರು ಮಾತನಾಡಿ, ನಾಯಿಗಳ ಹಾವಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಬಿಟ್ಟರೆ, ಬೇರೆ ಏನೂ ಕ್ರಮ ಕೈಗೊಳ್ಳುವಂತಿಲ್ಲ ಎಂದಾಗ, ಏನಾದರೊಂದು ಪರಿಹಾರ ಹುಡುಕಲೇ ಬೇಕಿದೆ ಎಂದು ನಾಗರಾಜ್ ಹೇಳಿದರು.

ಹಂದಿಗಳ ಸ್ಥಳಾಂತರಕ್ಕೆ ಹಾಗೂ ಸಾಕು ನಾಯಿಗಳನ್ನು ಮನೆಯೊಳಗೆ ಕಟ್ಟಿಕೊಳ್ಳುವಂತೆ ಮಾಧ್ಯಮಗಳ ಮೂಲಕ ಜನರಿಗೆ ತಿಳಿಸುವಂತೆಯೂ, ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಕೂಡಲೇ ಆರಂಭಿಸುವಂತೆಯೂ ಮೇಯರ್ ಚಮನ್ ಸಾಬ್ ಅಧಿಕಾರಿಗಳಿಗೆ ಸೂಚಿಸಿದರು.

ನಾಮನಿರ್ದೇಶಿತ ಸದಸ್ಯ ಸಾಗರ್ ಮಾತನಾಡಿ, ಇದ್ದಾಗ ಸಿಬ್ಬಂದಿಯಿಂದ ಕೆಲಸ ಮಾಡಿಸಿಕೊಳ್ಳುವ ಪಾಲಿಕೆ ಅಧಿಕಾರಿಗಳು, ಅವರು ಮೃತಪಟ್ಟಾಗ ಸಾಂತ್ವನ ಹೇಳಿ ಮಾನವೀಯತೆ ಮೆರೆಯ ಬೇಕು. ಮೊನ್ನೆ ನೌಕರ ಲಕ್ಷ್ಮಣ್ ಆತ್ಮಹತ್ಯೆ ಮಾಡಿಕೊಂಡಾಗ ಸಹಾಯಕ ಅಭಿಯಂತರರು ಯಾರೂ ಮನೆಗೆ ತೆರಳಿ ಸಾಂತ್ವನ ಹೇಳಲಿಲ್ಲ. ಪೌರ ಕಾರ್ಮಿಕರು ಮೃತಪಟ್ಟಾಗ ಅಂತ್ಯಕ್ರಿಯೆಗೆ ನೀಡುವ ಹಣವನ್ನೂ ತಡವಾಗಿ ಕೊಡಲಾಗುತ್ತದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರು, ನಾನಾ ಕೌಟುಂಬಿಕ ಕಾರಣಗಳಿಂದ ಲಕ್ಷ್ಮಣ ಆತ್ಮಹತ್ಯೆ ಮಾಡಿಕೊಂಡಿದ್ದು, ಅವರ ಅವಲಂಬಿತರಿಗೆ ಅಂತ್ಯಕ್ರಿಯೆಗಾಗಿ 15 ಸಾವಿರ ರೂ. ಕೊಡಲಾಗಿದೆ ಎಂದರು. ಜತೆಗೆ ಪಾಲಿಕೆ ನೌಕರರಿಗಾಗಿ ಆರೋಗ್ಯ ವಿಮೆ ಮಾಡಿಸುವ ಬಗ್ಗೆಯೂ ಚರ್ಚಿಸಲಾಗುತ್ತಿದೆ ಎಂದರು.

ಸದಸ್ಯ ಕೆ.ಎಂ. ವೀರೇಶ್ ಮಾತನಾಡಿ, ಟಿವಿ ಸ್ಟೇಷನ್ ಕರೆ ಏರಿಯ ದುರಸ್ತಿ ಕಾಮಗಾರಿ ಬಗ್ಗೆ ಆಕ್ಷೇಪಿಸಿ, ವಾಯುವಿಹಾರಿಗಳು ಗುಂಡಿಗೆ ಬೀಳುವಂತಾಗಿದೆ. ಅಲ್ಲದೇ ಬೀದಿ ದೀಪಗಳೂ ಇಲ್ಲದಂತಾಗಿವೆ ಎಂದರು.

ಉಪ ಮೇಯರ್ ಸೋಗಿ ಶಾಂತಕುಮಾರ್ ವೇದಿಕೆಯಲ್ಲಿದ್ದರು. ಇತ್ತೀಚೆಗೆ ನಿಧನರಾದ ನಗರಸಭೆ ಮಾಜಿ ಸದಸ್ಯ ಹೇಮಂತರಾಜ್, ಪಾಲಿಕೆ ನೌಕರ ಲಕ್ಷ್ಮಣ್ ಅವರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮಾಡಲಾಯಿತು.

## 33ನೇ ವಾರ್ಡ್‌ನಲ್ಲಿ ವಾರಕ್ಕೆರಡು ಬಾರಿ ಕಸ ಸಂಗ್ರಹಣೆ

33ನೇ ವಾರ್ಡ್‌ನಲ್ಲಿ ವಾರಕ್ಕೆ ಎರಡು ಬಾರಿ ಮಾತ್ರ ಕಸ ಸಂಗ್ರಹ ವಾಹನಗಳು ಬರುತ್ತಿವೆ. ಒಬ್ಬೊಬ್ಬರು ಎಂಟು ಬಕೆಟ್ ಕಸ ಹಾಕುವ ಸ್ಥಿತಿ ನಿರ್ಮಾಣವಾಗಿದೆ ಎಂದ ಸದಸ್ಯ ಆರ್.ಎಲ್. ಶಿವಪ್ರಕಾಶ್ ಕೂಡಲೇ ಅಲ್ಲಿ ನಿತ್ಯ ಕಸ ಸಂಗ್ರಹ ವಾಹನ ಬರುವ ವ್ಯವಸ್ಥೆ ಆಗಬೇಕು. ಇಲ್ಲದಿದ್ದರೆ ಪಾಲಿಕೆ ಎದುರು ಕಸ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಚಮನ್ ಸಾಬ್, ಪೌರಕಾರ್ಮಿಕರ ಕೊರತೆಯಿದ್ದು ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲು ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಗಿದೆ. ಅಲ್ಲಿಯವರೆಗೂ ಹೆಚ್ಚಿನ ಬಾರಿ ವಾಹನ ಕಳುಹಿಸಲು ಕ್ರಮ ವಹಿಸಲಾಗುವುದು ಎಂದರು.

## ಲಂಚಕ್ಕೆ ಮಾರಾಟ ಆಗುತ್ತಿರುವ ಇ-ಸ್ವತ್ತು

ಮಹಾನಗರಪಾಲಿಕೆಯಲ್ಲಿ ಲಂಚ ಮಿತಿ ಮೀರಿದೆ. ಪಾಲಿಕೆಯಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಿದ್ದು, ಸಾಮಾನ್ಯ ಜನಕ್ಕೆ ತಿಂಗಳಾದರೂ ಇ-ಸ್ವತ್ತು ಸಿಗಲ್ಲ. ಆದರೆ, ಮಧ್ಯವರ್ತಿಗಳ ಮೂಲಕ ಲಂಚ ಕೊಟ್ರೇ ಒಂದೇ ದಿನದಲ್ಲಿ ಇ-ಸ್ವತ್ತು ಸಿಗುತ್ತದೆ ಎಂದು ಆಡಳಿತ ಕಾಂಗ್ರೆಸ್ ಪಕ್ಷದ ಸದಸ್ಯರು ಕಿಡಿಕಾರಿದರು.

ಸಭೆಯಲ್ಲಿ ಮಾತನಾಡಿದ ನಾಮನಿರ್ದೇಶಿತ ಸದಸ್ಯ ಸುರಭಿ ಶಿವಮೂರ್ತಿ, ಪಾಲಿಕೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಇ-ಸ್ವತ್ತು ಕೊಡಲು ಸಾವಿರಾರು ರೂಪಾಯಿ ಲಂಚ ಕೇಳಲಾಗುತ್ತಿದೆ. ಇದರಿಂದ ಸಾಮಾನ್ಯ ಜನಕ್ಕೆ ಅರ್ಜಿ ಸಲ್ಲಿಸಿ ತಿಂಗಳುಗಳು ಕಳೆದರೂ ಇ-ಸ್ವತ್ತು ಸಿಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಆರೋಪಕ್ಕೆ ಇನ್ನೊಬ್ಬ ಕಾಂಗ್ರೆಸ್ ಸದಸ್ಯ ಉದಯಕುಮಾರ್ ಧ್ವನಿಗೂಡಿಸಿದರು. ಮಧ್ಯವರ್ತಿಗಳ ಹಾವಳಿಯ ದಾಖಲೆ ಪ್ರದರ್ಶನ ಮಾಡಿದ ಅವರು, ಕೂಡಲೇ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ, ಪಾಲಿಕೆಯನ್ನು ಮಧ್ಯವರ್ತಿ ಮುಕ್ತಗೊಳಿಸಬೇಕು ಎಂದು ಆಗ್ರಹಿಸಿದರು.

# ಮಹಿಳಾ ಮೀಸಲಾತಿ ವಿರೋಧಿಸಿದ್ದರು

(1ನೇ ಪುಟದಿಂದ) ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎಂಬ ಬೇಡಿಕೆ ಮುನ್ನೆಲೆಗೆ ಬಂದಿತು ಎಂದವರು ತಿಳಿಸಿದರು.

1987ರಲ್ಲಿ ಕರ್ನಾಟಕದವರೇ ಆದ ಮಾರ್ಗರೇಟ್ ಆಳ್ವ ನೇತೃತ್ವದ ಸಮಿತಿಯು ಮಹಿಳೆಯರಿಗೆ ಪಂಚಾಯ್ತಿ, ವಿಧಾನಸಭೆ ಹಾಗೂ ಸಂಸತ್ತಿನಲ್ಲಿ ಮೀಸಲಾತಿ ಕಲ್ಪಿಸಲು ಶಿಫಾರಸ್ಸು ಮಾಡಿತು. ಆದರೆ, 1993-94ರಲ್ಲಿ ಪಂಚಾಯ್ತಿಗಳಲ್ಲಿ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ಪ್ರಸ್ತಾವನೆ ಮಾತ್ರ ಜಾರಿಗೆ ತರಲು ಸಾಧ್ಯವಾಯಿತು ಎಂದು ಸುರೇಶ್ ಹೇಳಿದರು.

1996ರಲ್ಲಿ ಪ್ರಧಾನ ಮಂತ್ರಿಯಾಗಿದ್ದ ಹೆಚ್.ಡಿ. ದೇವೇಗೌಡರು ಮಹಿಳಾ ಮೀಸಲಾತಿ ಪರ ಮಸೂದೆಯನ್ನು ಮಂಡಿಸಿದರು. ಆದರೆ, ಒ.ಬಿ.ಸಿ. ವರ್ಗಕ್ಕೆ ಒಳಮೀಸಲಾತಿ ಕಲ್ಪಿಸಬೇಕು ಎಂದು ಕೆಲ ಪಕ್ಷಗಳು ಪ್ರತಿಪಾದಿಸಿದವು. ಇದರಿಂದಾಗಿ ಮಸೂದೆ ಜಾರಿಗೆ ತರಲು ಸಾಧ್ಯವಾಗಲಿಲ್ಲ ಎಂದರು.

ನಂತರದಲ್ಲಿ ಅಧಿಕಾರಕ್ಕೆ ಬಂದ ಅಟಲ್ ಬಿಹಾರಿ ವಾಜಪೇಯಿ ಹಾಗೂ ಮನಮೋಹನ್ ಸಿಂಗ್ ಅವಧಿಯಲ್ಲಿ ಮೀಸಲಾತಿ ಜಾರಿಗೆ ಪ್ರಯತ್ನಗಳು ನಡೆದವಾದರೂ ಮಸೂದೆಗಳು ಅಂಗೀಕಾರಗೊಳ್ಳಲಿಲ್ಲ ಎಂದು ಹೇಳಿದರು.

2023ರಲ್ಲಿ ಮತ್ತೆ ಮಹಿಳಾ ಮೀಸಲಾತಿ ಮಸೂದೆ ಮಂಡಿಸಿ ಅಂಗೀಕಾರ ಪಡೆಯಲು ಸಾಧ್ಯವಾಯಿತು. ಮುಂದಿನ ಕ್ಷೇತ್ರ ಪುನರ್ವಿಂಗಡಣೆ ನಂತರ ವಿಧಾನಸಭೆ ಹಾಗೂ ಸಂಸತ್ತಿನಲ್ಲಿ ಮಹಿಳೆಯರು ಶೇ.33ರಷ್ಟು ಮೀಸಲಾತಿ ಪಡೆಯಲು ಸಾಧ್ಯವಾಗಲಿದೆ ಎಂದವರು ತಿಳಿಸಿದರು.

ಎ.ವಿ.ಕೆ. ಕಾಲೇಜಿನ ಐ.ಕ್ಯೂ.ಎ.ಸಿ. ಸಂಚಾಲಕ ಆರ್.ಆರ್. ಶಿವಕುಮಾರ್ ಮಾತನಾಡಿ, ಮಹಿಳೆಯರು ಈಗ ಎಲ್ಲ ವಲಯಗಳಲ್ಲಿ ಮುಂದೆ ಬರುತ್ತಿದ್ದಾರೆ. ಈಗ ಮಹಿಳೆಯರು ಹಾಗೂ ಸಮಾಜದ ಮನೋಭಾವ ಬದಲಾಗುವ ಅಗತ್ಯವಿದೆ ಎಂದು ಹೇಳಿದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಆರ್. ಉಷಾ ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆಯನ್ನು ಬಹುತೇಕ ಸರ್ವಸಮ್ಮತಿಯಿಂದ ಸಂಸತ್ತಿನಲ್ಲಿ ಅಂಗೀಕರಿಸಲಾಗಿದೆ. ಮಹಿಳೆಯರು ರಾಜಕೀಯ ನಾಯಕತ್ವ ಬೆಳೆಸಿಕೊಳ್ಳಲು ಈ ಮೀಸಲಾತಿ ಉಪಯುಕ್ತವಾಗಿದೆ ಎಂದರು.

ಎ.ವಿ.ಕೆ. ಕಾಲೇಜಿನ ಪ್ರಾಂಶುಪಾಲೆ ಕಮಲಾ ಸೊಪ್ಪಿನ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

# ಲಂಚದ ಸುಳಿಯಲ್ಲಿ ಸಿಲುಕಿದ ಅದಾನಿ

(1ನೇ ಪುಟದಿಂದ) ತನಿಖೆ ಆರಂಭಿಸಿದ್ದಾಗಿ ಪ್ರಾಸಿಕ್ಯೂಟರ್‌ಗಳು ಹೇಳಿದ್ದಾರೆ. ಅದಾನಿ ಸಮೂಹ ಅಮೆರಿಕದಲ್ಲಿ 2 ಶತಕೋಟಿ ಡಾಲರ್ ಸಾಲ ಹಾಗೂ ಬಾಂಡ್ ಪಡೆದಿತ್ತು. ಈ ಸಾಲದ ಸಂದರ್ಭದಲ್ಲಿ ಲಂಚ ಹಾಗೂ ಕಂಪನಿಯ ನೀತಿಗಳ ಬಗ್ಗೆ ತಪ್ಪು ಮಾಹಿತಿ ನೀಡಲಾಗಿತ್ತು ಎಂದು ಆರೋಪಿಸಲಾಗಿದೆ.

ಕೇಂದ್ರ ಸರ್ಕಾರಿ ಸ್ವಾಮ್ಯದ ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾಗೆ (ಎಸ್.ಇ.ಸಿ.ಐ.) 8 ಗಿಗಾವ್ಯಾಟ್ ವಿದ್ಯುತ್ ಪೂರೈಸಲು ಅದಾನಿ ಗ್ರೀನ್ ಎನರ್ಜಿ ಕಂಪನಿಯು 2021ರಲ್ಲಿ ಗುತ್ತಿಗೆ ಪಡೆದಿತ್ತು. ದೆಹಲಿಯ ಅಜ್ಯೂರ್ ಪವರ್ ಸಹ 4 ಗಿಗಾವ್ಯಾಟ್ ವಿದ್ಯುತ್ ಪೂರೈಸಲು ಅದಾನಿ ಸಮೂಹದ ಜೊತೆಗೆ ಟೆಂಡರ್ ಪಡೆದಿತ್ತು.

ಅದಾನಿ ಹಾಗೂ ಅಜ್ಯೂರ್ ನಮೂದಿಸಿದ್ದ ಬೆಲೆಗೆ ವಿದ್ಯುತ್ ಖರೀದಿದಾರರನ್ನು ಹುಡುಕುವಲ್ಲಿ ಎಸ್.ಇ.ಸಿ.ಐ. ವಿಫಲವಾಗಿತ್ತು. 2021 ಹಾಗೂ 2022ರಲ್ಲಿ ಅದಾನಿ ವೈಯಕ್ತಿಕವಾಗಿ ಸರ್ಕಾರಿ ಅಧಿಕಾರಿಗಳನ್ನು ಭೇಟಿ ಮಾಡಿ, ಲಂಚ ನೀಡುವುದಾಗಿ ಹೇಳಿದ್ದರು. ನಂತರ ಎಸ್.ಇ.ಸಿ.ಐ.ನಿಂದ ವಿದ್ಯುತ್ ಖರೀದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು ಎಂದು ಆರೋಪಿಸಲಾಗಿದೆ.

ಲಂಚದ ಭರವಸೆ ನೀಡಿದ ನಂತರ ಆಂಧ್ರ ಪ್ರದೇಶ, ಒಡಿಶಾ, ತಮಿಳುನಾಡು ಹಾಗೂ ಛತ್ತೀಸ್‌ಘಡಗಳು ಎಸ್.ಇ.ಸಿ.ಐ. ಜೊತೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡಿದ್ದವು.

ಪ್ರತಿ ಮೆಗಾವ್ಯಾಟ್ ವಿದ್ಯುತ್ ಖರೀದಿಗೆ 25 ಲಕ್ಷ ರೂ.ಗಳನ್ನು ಆಂಧ್ರ ಪ್ರದೇಶದ ಅಧಿಕಾರಿಯೊಬ್ಬರಿಗೆ ನೀಡಲಾಗಿತ್ತು. ನಂತರ ಆಂಧ್ರ ಸರ್ಕಾರ ಎಸ್.ಇ.ಸಿ.ಐ.ನಿಂದ 7 ಗಿಗಾವ್ಯಾಟ್ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡಿತ್ತು. ಇದೇ ಮಾರ್ಗದಲ್ಲಿ ಒಡಿಶಾ ಸಹ 500 ಮೆಗಾವ್ಯಾಟ್ ವಿದ್ಯುತ್ ಖರೀದಿಗೆ ಸಮ್ಮತಿಸಿತ್ತು.

ಅದಾನಿ ಸಮೂಹ ತನ್ನ ವಿರುದ್ಧದ ಎಲ್ಲಾ ಆರೋಪಗಳನ್ನು ತಳ್ಳಿ ಹಾಕಿದೆ. ಈ ಬಗ್ಗೆ ಎಲ್ಲಾ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದೆ. ಈ ನಡುವೆ, ಅದಾನಿ ಗ್ರೀನ್ ಎನರ್ಜಿಗಾಗಿ 600 ದಶಲಕ್ಷ ಬಾಂಡ್ ವಿತರಿಸುವ ಪ್ರಕ್ರಿಯೆಯನ್ನು ಕಂಪನಿ ಕೈ ಬಿಟ್ಟಿದೆ. ದೋಷಾರೋಪಕ್ಕೆ ಕೆಲವೇ ಗಂಟೆ ಮುಂಚೆ ಈ ಷೇರುಗಳು ಮೂರು ಪಟ್ಟು ಹೆಚ್ಚು ಬೇಡಿಕೆ ಪಡೆದುಕೊಂಡಿದ್ದವು.

# ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನ, ಆರ್ಥಿಕ ಅನುದಾನಕ್ಕಾಗಿ ಅರ್ಜಿ

ದಾವಣಗೆರೆ, ನ.21- ಕೇಂದ್ರೀಯ ಸೈನಿಕ ಮಂಡಳಿಯು ಭಾರತೀಯ ಸೇನೆಯ ಜೆ.ಸಿ.ಓ ರ್‍ಯಾಂಕ್ ವರೆಗಿನ ಅಥವಾ ವಾಯು ಸೇನೆ, ನೌಕಾ ಸೇನೆಯ ತತ್ಸಮಾನ ರ್‍ಯಾಂಕ್ ವರೆಗಿನ ಮಾಜಿ ಸೈನಿಕರ ಮಕ್ಕಳು, ದ್ವಿತೀಯ ಪಿಯುಸಿಯಲ್ಲಿ ಶೇ.60ಕ್ಕಿಂತ ಅಧಿಕ ಅಂಕ ಪಡೆದು, ಇಂಜಿನಿಯರಿಂಗ್, ಮೆಡಿಕಲ್ ಮತ್ತು ಇತರೆ ವೃತ್ತಿಪರ ಶಿಕ್ಷಣದಲ್ಲಿ ಪದವಿ ವ್ಯಾಸಂಗಕ್ಕಾಗಿ 2024-25ನೇ ಸಾಲಿನಲ್ಲಿ ಪ್ರವೇಶಾತಿ ಪಡೆದು ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಪ್ರಧಾನ ಮಂತ್ರಿ ಶಿಷ್ಯ ವೇತನ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಇದೇ ದಿನಾಂಕ 30ರ ಒಳಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಮಾಹಿತಿಗಾಗಿ 08182-220925 ಸಂಪರ್ಕಿಸಿ ಅಥವಾ ಕೇಂದ್ರೀಯ ಸೈನಿಕ ಮಂಡಳಿಯ ಜಾಲತಾಣ HTTPS://ONLINE.KSB.GOV.IN ವೀಕ್ಷಿಸಲು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕ ಡಾ.ಸಿ.ಎ. ಹಿರೇಮಠ ತಿಳಿಸಿದ್ದಾರೆ.

# ಚಿತ್ರದುರ್ಗದಲ್ಲಿ ಅಯ್ಯಪ್ಪ ಸ್ವಾಮಿ ಬ್ರಹ್ಮೋತ್ಸವ

ಚಿತ್ರದುರ್ಗ, ನ.21- ಮೆದೆಹಳ್ಳಿ ರಸ್ತೆಯಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ 25ನೇ ವರ್ಷದ 60 ದಿನಗಳ ಬ್ರಹ್ಮೋತ್ಸವವು ನಿನ್ನೆ ಆರಂಭಗೊಂಡಿದ್ದು, ಬರುವ ಜನವರಿ 13ರವರೆಗೆ ನಡೆಯಲಿದೆ. ಮಾಲಾಧಾರಿ ಗಳಿಗೆ ದೇವಸ್ಥಾನದಲ್ಲಿ ಪ್ರತಿನಿತ್ಯ ಉಚಿತ ಅನ್ನದಾನ ಕಾರ್ಯಕ್ರಮ ಜರುಗಲಿದೆ.

ಡಿಸೆಂಬರ್ 18ರ ಬುಧವಾರ ಸಂಜೆ 7ಕ್ಕೆ ಮೆಟ್ಟಿಲು ಪೂಜೆ, 22ಕ್ಕೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಹಾ ಅನ್ನದಾನ ಕಾರ್ಯಕ್ರಮ ಜರುಗಲಿದೆ. ಜನವರಿ 13ರ ಸೋಮವಾರ ಸಂಜೆ 6ಕ್ಕೆ ನಗರದಲ್ಲಿ ಅಯ್ಯಪ್ಪ ಸ್ವಾಮಿಯ ಆಭರಣ ಮೆರವಣಿಗೆ ಆಯೋಜಿಸಿದೆ.

ಜನವರಿ 14 ರಂದು ಮಕರ ಸಂಕ್ರಮಣದ ಅಂಗವಾಗಿ ಸ್ವಾಮಿ ಸನ್ನಿಧಿಯಲ್ಲಿ ಲಕ್ಷ ದೀಪೋತ್ಸವ ನಡೆಯಲಿದೆ.

# ಜಮ್ಮುವಿನಲ್ಲಿ ಕಾಶ್ಮೀರಿ ಪಂಡಿತರ ಅಂಗಡಿಗಳು ಧ್ವಂಸ

ಜಮ್ಮು, ನ. 20 – ಜಮ್ಮು ಅಭಿವೃದ್ಧಿ ಪ್ರಾಧಿಕಾರವು ನೋಟಿಸ್ ನೀಡದೇ ಕಾಶ್ಮೀರಿ ಪಂಡಿತರಿಗೆ ಸೇರಿದ ಹತ್ತಾರು ಅಂಗಡಿಗಳನ್ನು ಧ್ವಂಸಗೊಳಿಸಿದೆ ಎಂದು ಆರೋಪಿಸಲಾಗಿದೆ.

ಜಮ್ಮುವಿನ ಮುತ್ತಿ ಶಿಬಿರದಲ್ಲಿ ಮೂರು ದಶಕಗಳ ಹಿಂದೆ ಕಾಶ್ಮೀರಿ ಪಂಡಿತರು ಹೊಂದಿದ್ದ ಅಂಗಡಿಗಳನ್ನು ಧ್ವಂಸಗೊಳಿಸಲಾಗಿದೆ. ಈ ಕಾಶ್ಮೀರಿ ಪಂಡಿತರು ಹಿಂಸಾಚಾರಕ್ಕೆ ಸಿಲುಕಿ ಸ್ಥಳಾಂತರಗೊಂಡಿದ್ದರು. ಈ ಜಾಗದಲ್ಲಿ ಹಲವರು ಶೀಟುಗಳಿಂದ ರೂಪಿಸಲಾದ ಅಂಗಡಿಗಳನ್ನು ಹೊಂದಿದ್ದರು. ಈ ಹಳೆಯ ಅಂಗಡಿಗಳು ಜಮ್ಮು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಜಾಗದಲ್ಲಿದ್ದವು.

# ಆರ್ಥಿಕ ನೆರವು ಹೆಚ್ಚಿಸಲು ಕೇಂದ್ರಕ್ಕೆ ಮನವಿ

(1ನೇ ಪುಟದಿಂದ) ಮಾಡಬೇಕಿದೆ ಎಂಬುದಾಗಿ ನಬಾರ್ಡ್ ತಿಳಿಸಿದೆ. ಕರ್ನಾಟಕದಲ್ಲಿ ಈ ಬಾರಿ ಉತ್ತಮ ಮಳೆಯಾಗಿದ್ದು, ಮುಂಗಾರು ಚಟುವಟಿಕೆಗಳು ಚುರುಕುಗೊಂಡಿವೆ, ಹೀಗಾಗಿ ಅಲ್ಪಾವಧಿ ಕೃಷಿ ಸಾಲ ಬೇಡಿಕೆ ಹೆಚ್ಚಿದೆ ಎಂದು ವಿವರಿಸಿದ್ದಾರೆ.

2019-20ನೇ ಸಾಲಿನಲ್ಲಿ 4,200 ಕೋಟಿ ರೂ. ಕೃಷಿ ಸಾಲಕ್ಕೆ ಮಂಜೂರಾಗಿತ್ತು, ನಂತರ ಹೆಚ್ಚುವರಿಯಾಗಿ 700 ಕೋಟಿ ರೂ.ಗಳಿಗೆ ಅನುಮೋದನೆ ನೀಡಿದ್ದು, ಶೇ.15ರಷ್ಟು ಹೆಚ್ಚಿಸಲಾಗಿತ್ತು. 2020-21ರಲ್ಲಿ 5,500 ಕೋಟಿ ರೂ.ಗೆ ಅನುಮೋದನೆ ನೀಡಿ 1,300 ಕೋಟಿ ರೂ.ಗಳ ಹೆಚ್ಚುವರಿಯೊಂದಿಗೆ ಶೇ.27ರಷ್ಟು, 2022-23ರಲ್ಲಿ 5,550 ಕೋಟಿ ರೂ. ಜೊತೆಗೆ 66 ಕೋಟಿ ರೂ.ಗಳ ಹೆಚ್ಚುವರಿಯೊಂದಿಗೆ ಶೇ.1ರಷ್ಟು, 2023-24ರಲ್ಲಿ 5,600 ಕೋಟಿ ರೂ. ಜೊತೆಗೆ 55 ಕೋಟಿ ರೂ. ಹೆಚ್ಚುವರಿಯೊಂದಿಗೆ ಶೇ.1ರಷ್ಟು ಸಾಲ ಪ್ರಮಾಣ ಹೆಚ್ಚಿಸಲಾಗಿತ್ತು.

2021-22ನೇ ಸಾಲಿನಲ್ಲಿ 5,483 ಕೋಟಿ ರೂ.ಗಳ ಮಂಜೂರಾತಿ ನೀಡಿದ್ದು, 16 ಕೋಟಿ ರೂ.ಗಳನ್ನು ಕಡಿತ ಮಾಡಿ ಶೇ.1 ರಷ್ಟು ತಗ್ಗಿಸಲಾಗಿತ್ತು. ಈ ವರ್ಷ 2,340 ಕೋಟಿ ರೂ.ಗಳಿಗೆ ಮಾತ್ರ ಮಂಜೂರಾತಿ ನೀಡಿ 3,260 ಕೋಟಿ ರೂ.ಗಳನ್ನು ಕಡಿತ ಮಾಡುವ ಮೂಲಕ ಶೇ.58 ರಷ್ಟು ಸಾಲದ ಮೊತ್ತವನ್ನು ಕಡಿಮೆ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಅರ್ಹರ ಬಿಪಿಎಲ್ ಚೀಟಿ ಹಿಂತಿರುಗಿಸಿ

(1ನೇ ಪುಟದಿಂದ) ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದೆ.

ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಆಗಿಂದಾಗ್ಗೆ ಪತ್ರ ಬರೆದು ಎಚ್ಚರಿಸುತ್ತಿದೆ. ನಾವು ಈ ಎಲ್ಲಾ ಮಾನದಂಡಗಳನ್ನು ಆಧಾರ ವಾಗಿಟ್ಟುಕೊಂಡು ಅನರ್ಹರ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡುತ್ತಿರುವುದಾಗಿ ತಿಳಿಸಿದರು.


ಲೀಸ್ / ಬಾಡಿಗೆಗೆ ಮನೆಗಳು ದೊರೆಯುತ್ತವೆ
ಮೂರು ಬೆಡ್ ರೂಮ್, ಎರಡು ಬೆಡ್ ರೂಮ್, ಸಿಂಗಲ್ ಬೆಡ್ ರೂಮ್.
ದಕ್ಷಿತ್ ಐನಳ್ಳಿ ಏಜೆಂಟ್
96061 26471

ಕಾರ್ & ಆಟೋ ದಿನದ ಬಾಡಿಗೆಗೆ
ನುರಿತ ಡ್ರೈವರ್ ಗಳು
ಸಂಪರ್ಕಿಸಿ :
9164256425
9743654365

RESULT-ORIENTED TUITION CLASSES
For: State Syllabus | CBSE | ICSE | IGCSE Achieve Your Academic Goals with Expert Guidance and Personalized Attention ! Home Tuitions Available for your convenience! Contact Us Today:
97438 98952

CARS FOR SALE
NEW Hyundai Creta
KIA Seltos diesel
Renault Duster
Maruthi alto k10 Contact :
Daivik Iynahalli
99456 43223

ಬೇಕಾಗಿದ್ದಾರೆ
ಹೋಲ್‌ಸೇಲ್ ಮೆಡಿಕಲ್ ಫಾರ್ಮಾದಲ್ಲಿ ಪಾರ್ಟ್ ಟೈಂ ಅಥವಾ ಫುಲ್ ಟೈಂ ಕೆಲಸ ಮಾಡಲು SSLC ಅಥವಾ PUC ಪಾಸ್ ಅಥವಾ ಫೇಲ್ ಆದ ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಹಾಗೂ ಬೋನಸ್ ಇರುತ್ತದೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಮೊ: 98806 59221, 93410 21860

ತಕ್ಷಣ ಬೇಕಾದ್ದಾರೆ
wholesale ಅಂಗಡಿಗೆ Supervisor ಮತ್ತು ಟ್ಯಾಲಿ ಬಿಲ್ಲಿಂಗ್ ಆಪರೇಟರ್ ಬೇಕಾಗಿದ್ದಾರೆ. ಅನುಭವಿಗಳಿಗೆ ಆದ್ಯತೆ ನೀಡಲಾಗುವುದು. ಶಿಕ್ಷಣ ಅರ್ಹತೆ: PUC / DEGREE. ವಯಸ್ಸಿನ ಮಿತಿ : 18-45 ವರ್ಷಗಳು. ಸಂಪರ್ಕಿಸಿ :
94822 14855

ಸೈಟುಗಳು ಮಾರಾಟಕ್ಕಿವೆ
ದಾವಣಗೆರೆ ಹದಡಿ ರಸ್ತೆ, ಬೈಪಾಸ್ ಪಕ್ಕ ವಿಶ್ವ ಚೇತನ ಸ್ಕೂಲ್ ಹಿಂಭಾಗಲ್ಲಿ 40x65 ದಕ್ಷಿಣ 2900/- 30x60 ಉತ್ತರ (30 ಅಡಿ ರಸ್ತೆ) ದಕ್ಷಿಣ (120 ಅಡಿ ರಸ್ತೆ) 3200/- ಎರಡು ಕಡೇ ರೋಡ್.
97421 44715

ಸೈಟುಗಳು ಮಾರಾಟಕ್ಕಿವೆ
LIC ಕಾಲೋನಿಯಲ್ಲಿ ತರಳಬಾಳು ಕೃಷಿ ಕೇಂದ್ರದ ಹಿಂಭಾಗ 40x60 North, 30x54 North, 30x40 North, 30x70 North, 30x50 East-South Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಬೇಕಾಗಿದ್ದಾರೆ
ಅನುಭವವುಳ್ಳ ಇಂಜಿನಿಯರ್, ಲೇಔಟ್ ಪ್ಲಾನ್ ಹಾಕುವವರು Girls / Boys ಆಕರ್ಷಕ ಸಂಬಳ ಕೊಡುತ್ತೇವೆ.
Computer Cad ಹಾಕುವವರು.
99640 05604
96633 12721, 76766 96963

ಸೈಟ್ ಮಾರಾಟಕ್ಕಿದೆ
30x40 ಪೂರ್ವ 30x50 ಪಶ್ಚಿಮ ದೂಡಾ ಅಪ್ರೂವ್ಡ್ KHB Judge Quarters Backside, KM Layout
90361 89699
72592 69940

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ, ಆಕರ್ಷಕ ಸಂಬಳದೊಂದಿಗೆ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98448 18900
70227 92613, 98448 08903

ಬೇಕಾಗಿದ್ದಾರೆ
ಟಾಟಾ ಪವರ್ ಸೋಲಾರ್‌ನಲ್ಲಿ ಮಾರ್ಕೆಟಿಂಗ್ ಮಾಡಲು ಪಿಯುಸಿ ಅಥವಾ ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ.
ಮೆ. ಬಸವಶ್ರೀ ಸೋಲಾರ್ ಟೆಕ್ನಾಲಜೀಸ್,
ನಂ. 43H, ಎಸ್‌ಜೆಜೆಎಂ ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ
ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಆದವರು ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
94819 44141

1 BHK HOUSE FOR LEASE
In Central City
Vitrified Tiles Flooring with Good Water Facility
70199 49119

ಸೈಟು ಮಾರಾಟಕ್ಕಿದೆ
B.I.E.T. College ರಸ್ತೆ ಹಾಗೂ ಹೇಮಾವತಿ ಹಾಸ್ಟೆಲ್ ಎದುರು 3,200 ಅಡಿ ಅಳತೆಯ Corner ಸೈಟು ಮಾರಾಟಕ್ಕಿದೆ. ಈ ಸೈಟಿನಲ್ಲಿ ಸುಮಾರು ರೂ. 50,000/- ಬಾಡಿಗೆ ಬರುತ್ತಿದೆ.
ಸಂಪರ್ಕಿಸಿ:
Mohan Real Estate Agencies
97424 34049

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
ಹಿಂದೂ ವಧು-ವರರ ಮಾಹಿತಿ ಕೇಂದ್ರ
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

ಶ್ರೀ ಸಾಯಿ ಫೈನಾನ್ಸ್ (ರಿ)
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು. ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್ ರೈಸ್ ಸೆಂಟರ್ ಇತ್ಯಾದಿಗಳಿಗೆ ಹುಡುಗರು ಬೇಕಾಗಿದ್ದಾರೆ. ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ವಿದ್ಯಾರ್ಹತೆ : SSLC ಉತ್ತೀರ್ಣ, ಸಂಪರ್ಕಿಸಿ :
96860 22969

ಬೇಕಾಗಿದ್ದಾರೆ
Ace Tractor Showroomಗಾಗಿ ಅಕೌಂಟೆಂಟ್ (ಮಹಿಳೆಯರು) ಟ್ಯಾಲಿ ಕಲಿತವರು ಹಾಗೂ ಅನುಭವವುಳ್ಳವರಿಗೆ ಆದ್ಯತೆ ಮತ್ತು Diploma in Automobile / Mechanical ಆಗಿರುವವರು ಸೇಲ್ಸ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಹಾಗೂ ದ್ವಿಚಕ್ರ ವಾಹನ ಹೊಂದಿದವರಿಗೆ ಆದ್ಯತೆ.
80952 54434

WANTED
Boys & Girls required for billing work at
Food Mart Supermarket.
Quali : Any Degree
Mob : 98864 63531

ಬೇಕಾಗಿದ್ದಾರೆ
ಲೇಡಿ ಸೆಕ್ಯೂರಿಟಿ ಗಾರ್ಡ್
(ಊಟ, ತಿಂಡಿ ವ್ಯವಸ್ಥೆ ಇರುತ್ತದೆ)
ಸಂಪರ್ಕಿಸಿ :
ಎಸ್.ಟಿ. ಸೋಮಶೇಖರ್
98803 37686

ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ
ನುರಿತ ಹಾಗೂ ಅನುಭವವಿರುವ ಸೇಲ್ಸ್ ಗರ್ಲ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಗೌಡ್ರ ಜಯದೇವಪ್ಪ ಕಾಸ್ಮೆಟಿಕ್
ಮಾಮಾಸ್ ಜಾಯಿಂಟ್ ರೋಡ್, ದಾವಣಗೆರೆ.
ಫೋ. : 99019 69595

ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ, ಫೈನಾನ್ಸ್, GST & Income Tax ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
Mob: 94838 62779

ಕಾಡು ಬೆಳೆಸಿ ನಾಡು ಉಳಿಸಿ

TUITIONS
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

ಮನೆ ಮಾರಾಟಕ್ಕೆ ಇದೆ
ಸರಸ್ವತಿ ಬಡಾವಣೆಯಲ್ಲಿ 40x60 ಗ್ರೌಂಡ್ ಫ್ಲೋರ್, ಫಸ್ಟ್ ಫ್ಲೋರ್ ಮನೆ ಮಾರಾಟಕ್ಕೆ ಇದೆ. ಮತ್ತು ಕೆ.ಬಿ. ಬಡಾವಣೆಯಲ್ಲಿ ಸೈಟ್ ಮಾರಾಟಕ್ಕೆ ಇದೆ. ಸಂಪರ್ಕಿಸಿ.
8792745071

ಶ್ರೀ ಸುಬ್ರಹ್ಮಣ್ಯಂ ಬೆಣ್ಣೆದೋಸೆ
ನಮ್ಮಲ್ಲಿ ಮದುವೆ ಮತ್ತು ಶುಭ ಸಮಾರಂಭಗಳಿಗೆ ಹಳ್ಳಿ ಬೆಣ್ಣೆಯಿಂದ ಬೆಣ್ಣೆ ದೋಸೆ, ಖಾಲಿ ದೋಸೆ, ಇತರ ದೋಸೆ ಮಾಡಿಕೊಡಲಾಗುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
95915 35059, 91088 99500

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

REQUIRED
Freshers or Learners for Auditor office
86180 47131

ಪತ್ರ ಕಳೆದಿದೆ
ಶ್ರೀ ರುದ್ರಮುನಿ ಇ. ಬಿನ್ ಗೋವಿಂದಪ್ಪ ಕಂದನಕೋವಿ ಗ್ರಾಮದ ವಾಸಿಯಾದ ನಾನು ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಚೇರಿಯ 1ನೇ ಪುಸ್ತಕದ ದಸ್ತಾವೇಜು ನಂಬರ್ ಡಿವಿಜಿ-1-10728-2004-05 ಆಗಿ ಸಿಡಿ ನಂಬರ್ ಡಿವಿಜಿಡಿ 27ನೇದ್ದರಲ್ಲಿ ದಿನಾಂಕ : 29.03.2005 ರಂದು ನೋಂದಣಿಯಾಗಿರುವ ವಿಭಾಗ ಪತ್ರವಾಗಿರುತ್ತದೆ. ಈ ಪತ್ರವು ದಿನಾಂಕ : 10.10.2024 ರಂದು ಮನೆಯನ್ನು ಸ್ವಚ್ಛಗೊಳಿಸುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನಿನ ನಂಬರ್‌ಗೆ ತಿಳಿಸಲು ಕೋರಿದೆ.
9741812146 ಸಹಿ /- ರುದ್ರಮುನಿ

3 ಬಿಹೆಚ್‌ಕೆ ಮನೆ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ
ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸ್‌ನಲ್ಲಿ 3 ಬಿಹೆಚ್‌ಕೆ ಮನೆ ಮಾರಾಟಕ್ಕೆ ಇದೆ.
(98 lakhs)
81054 25694
79755 95836

REQUIRED FOR WORK
10th Pass or Fail.
Contact :
9449580761
9620283870

ಬಾಡಿಗೆಗೆ ಸಂಪರ್ಕಿಸಿ
ಲಹರಿ ಆಟೋಮೋಟಿವ್ಸ್
# 856/17, ಸಬ್ ರಿಜಿಸ್ಟರ್ ಆಫೀಸ್ ಎದುರುಗಡೆ, ಪಿಬಿ ರಸ್ತೆ, ದಾವಣಗೆರೆ-2. ಕೆಳಗಿನ ಮಹಡಿ 1500 ಅಡಿಗಳು, 1ನೇ ಮಹಡಿ 3500 ಅಡಿಗಳು, ಖಾಲಿ ಜಾಗ 4400 ಚ.ಅ., ಸೈಟ್ ಸೈಜ್ 50x88
98444 20009, 90711 19996

3BHK HOUSE FOR RENT
At Uttam Badavane, 1st main, B ward No - 30, Avaragere Road. Contact :
99015 64535
94498 04535

WANTED
Banking Sector Tele Caller
(Female Only)
Qualification : Any Degree
81508 12961
Interview Time : 11AM

FLAT FOR LEASE
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

ಬಾಡಿಗೆಗೆ ಇದೆ
ವಿದ್ಯಾನಗರ 2ನೇ ಬಸ್ ಸ್ಟಾಪ್ ಪಾರ್ಕ್ ಹತ್ತಿರ, 2ನೇ ಮಹಡಿಯಲ್ಲಿ, ಒಂದು ಬೆಡ್ ರೂಂ ಮನೆ ವಿಶಾಲವಾದ ಟೆರೆಸ್ ಹೊಂದಿರುವ ಉತ್ತರಾಭಿಮುಖದ ಸುಸಜ್ಜಿತವಾದ ಹೊಸಮನೆ ಬಾಡಿಗೆಗೆ ಇದೆ. ಬೋರ್‌ವೆಲ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ.
99026 88442

# ಶೀಘ್ರ ಕೆಎಸ್‌ಆರ್‌ಟಿಸಿ ಡಿಪೋ ಆರಂಭಿಸಲು ಆಗ್ರಹ

ಜಗಳೂರು, ನ. 21 - ಕೆಎಸ್‌ಆರ್‌ಟಿಸಿ ಡಿಪೋ ಪ್ರಾರಂಭಿಸಲು ಒತ್ತಾಯಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರಗತಿಪರ ಸಂಘಟನೆಗಳು ಪ್ರತಿಭಟನೆ ನಡೆಸಿ ಗ್ರೇಡ್ -2 ತಹಶೀಲ್ದಾರ್ ಮಂಜಾನಂದ, ಕೆಎಸ್‌ಆರ್‌ಟಿಸಿ ಡಿಎಂ ಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು.




ಗುರುವಾರ ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ನೂರಾರು ಸಂಖ್ಯೆಯ ವಿದ್ಯಾರ್ಥಿಗಳ ಪ್ರತಿಭಟನಾ ಮೆರವಣಿಗೆ ಅಧಿಕಾರಿಗಳ ವಿರುದ್ದ ಘೋಷಣೆ ಕೂಗುತ್ತಾ ಮಹಾತ್ಮಗಾಂಧಿ ವೃತ್ತದ ಮೂಲಕ ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿ ಗಂಟೆಗೂ ಅಧಿಕ ಕಾಲ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು.

ಎಸ್‌ಎಫ್‌ಐ ರಾಜ್ಯ ಮುಖಂಡ ಅನಂತರಾಜ್ ಮಾತನಾಡಿ, ಕಳೆದ ದಶಕಗಳಿಂದ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಆರಂಭಕ್ಕೆ ನಿರಂತರ ಹೋರಾಟ ನಡೆಸಲಾಗಿತ್ತು. ಕಳೆದ ಅವಧಿಯ ಆಡಳಿತ ಸರ್ಕಾರಗಳು ಹಾಗೂ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಪಟ್ಟಣದ ಹೊರ ಹೊಲಯದಲ್ಲಿ ಸರ್ವೆ ನಂ. 51/4 ರಲ್ಲಿ ಸರ್ಕಾರಿ ಜಮೀನಿನಲ್ಲಿ ಜಾಗವನ್ನು ಗುರುತಿಸಿ ಕಂದಾಯ ಇಲಾಖೆಯಿಂದ ಪಹಣಿ ಹಸ್ತಾಂತರಗೊಳಿಸಿ ಪ್ರಕ್ರಿಯೆ ನಡೆಸುವ ಭರವಸೆ ನೀಡಿದ್ದರು. ಆದರೆ ಇದುವರೆಗೂ ಯಾವುದೇ ಕಾಮಗಾರಿಗೆ ಚಾಲನೆ ಸಿಗದೆ ದಿವ್ಯ ನಿರ್ಲಕ್ಷ್ಯ ವಹಿಸಿರುವುದು ಗ್ರಾಮೀಣ ವಿದ್ಯಾರ್ಥಿ ಸಮೂಹ ಸರ್ಕಾರಿ ಬಸ್ ಸೌಕರ್ಯದಿಂದ ವಂಚಿತವಾಗಿರುವುದು ಖಂಡನೀಯ ಎಂದರು. ತಾಲ್ಲೂಕಿನ ಅನೇಕ ಹಳ್ಳಿಗಳು ಸರ್ಕಾರಿ ಬಸ್ ಸಂಪರ್ಕವಿಲ್ಲದೆ ಪ್ರತಿ ನಿತ್ಯ ವಿದ್ಯಾರ್ಥಿಗಳು ಕಾಲೇಜುಗಳಿಗೆ ಸಕಾಲದಲ್ಲಿ ಆಗಮಿಸದೇ ಪಾಠ, ಪ್ರವಚನಗಳಿಗೆ ಅಡಚಣೆಯಾಗುತ್ತಿದೆ. ಕೂಡಲೇ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಕಳೆದ ವರ್ಷ ಸಲ್ಲಿಸಿದ ಮಾರ್ಗಗಳ ಅನ್ವಯ ತಾತ್ಕಾಲಿಕವಾಗಿ 5 ಬಸ್‌ಗಳನ್ನು ಗ್ರಾಮೀಣ ಸಾರಿಗೆಗೆ ಓಡಿಸಬೇಕು ಎಂದು ಮುಖಂಡ ಮಹಲಿಂಗಪ್ಪ ಒತ್ತಾಯಿಸಿದರು.

ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಮಾದಿಹಳ್ಳಿ ಮಂಜುನಾಥ್, ಡಿಎಸ್‌ಎಸ್ ಸಂಚಾಲಕ ಸತೀಶ್ ಮಲೆ ಮಾಚಿಕೆರೆ ಮಾತನಾಡಿ, ಶೀಘ್ರವಾಗಿ ಕೆಎಸ್‌ಆರ್‌ಟಿಸಿ ಡಿಪೋ ಆರಂಭಿಸಲು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ತಾಲ್ಲೂಕು ಅಧ್ಯಕ್ಷ ವಕೀಲ ತಮಲೇಹಳ್ಳಿ ಅಂಜಿನಪ್ಪ, ಮುಖಂಡ ವಕೀಲ ಆರ್. ಓಬಳೇಶ್, ಕುಮಾರ್, ಲೋಕೇಶ್, ಸತ್ಯಮೂರ್ತಿ, ಅಶೋಕ, ಕಾಟಪ್ಪ, ಸುನಿತಾ, ಚಿತ್ತಪ್ಪ, ಸೇರಿದಂತೆ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ನಗರದಲ್ಲಿ ಇಂದಿನಿಂದ ಮಕ್ಕಳ ಶ್ವಾಸಕೋಶ ತಜ್ಞರ ಜಾಗತಿಕ ಸಮ್ಮೇಳನ

ದಾವಣಗೆರೆ, ನ.21- ರಾಷ್ಟ್ರೀಯ ಶ್ವಾಸಕೋಶ ಅಧ್ಯಾಯ ಜಿಲ್ಲಾ ಹಾಗೂ ನಗರ ಶಾಖೆ ವತಿಯಿಂದ ನಗರದ ಎಸ್.ಎಸ್. ಕನ್ವೆನ್ಷನ್ ಹಾಲ್‌ನಲ್ಲಿ ನಾಳೆ ದಿನಾಂಕ 22ರಿಂದ 24ರ ವರೆಗೆ 'ಮಕ್ಕಳ ಶ್ವಾಸಕೋಶ ತಜ್ಞರ ಜಾಗತಿಕ ಸಮ್ಮೇಳನ' ನಡೆಯಲಿದೆ ಎಂದು ಸಂಘಟನಾ ಅಧ್ಯಕ್ಷ ಡಾ. ಎನ್.ಕೆ. ಕಾಳಪ್ಪನವರ್ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್.ಎಸ್. ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರ, ಜೆಜೆಎಂ ವೈದ್ಯಕೀಯ ಕಾಲೇಜು, ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ಸಮ್ಮೇಳನ ನಡೆಯುತ್ತಿದ್ದು, ದಾವಣಗೆರೆಯಲ್ಲಿ ಇದು 3ನೇ ಬಾರಿಗೆ ನಡೆಯುತ್ತಿರುವ ಕಾರ್ಯಕ್ರಮವಾಗಿದೆ ಎಂದರು.

ರೆಸ್ಪಿಕಾನ್-2024 ರಾಷ್ಟ್ರೀಯ-ಶ್ವಾಸಕೋಶದ ಅಧ್ಯಾಯ 36ನೇ ವಾರ್ಷಿಕ ಸಮ್ಮೇಳನದಲ್ಲಿ, ಮಕ್ಕಳ ಶ್ವಾಸಕೋಶ ಆರೈಕೆಯಲ್ಲಿ ಇತ್ತೀಚಿನ ಪ್ರಗತಿ ಮತ್ತು ಸಾಧನೆಗಳನ್ನು ಚರ್ಚಿಸುವ ನಿಟ್ಟಿನಲ್ಲಿ ಜಾಗತಿಕ ತಜ್ಞರ ಸಮ್ಮೇಳನ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸಮ್ಮೇಳನದಲ್ಲಿ ಮುಖ್ಯವಾಗಿ ಮಕ್ಕಳ ಶ್ವಾಸಕೋಶ ಆರೋಗ್ಯದ ಪ್ರಗತಿಗೆ ಹೆಚ್ಚಿನ ರೀತಿಯಲ್ಲಿ ಒತ್ತುಕೊಡಲಾಗಿದ್ದು, ಪ್ರಮುಖವಾಗಿ ಕಾರ್ಯಾಗಾರಗಳು, ಪ್ಯಾನಲ್ ಚರ್ಚೆಗಳ ಸರಣಿ, ಸಂಶೋಧಕರಿಗೆ ತಮ್ಮ ನವೀನತೆಯ ಆವಿಷ್ಕಾರಗಳನ್ನು ಪ್ರಸ್ತುತ ಪಡಿಸಲು ವೇದಿಕೆ ಒದಗಿಸಲಾಗಿದೆ ಎಂದು ತಿಳಿಸಿದರು.

22ರ ಬೆಳಗ್ಗೆ 8 ರಿಂದ 4.30ರ ವರೆಗೆ ಜೆಜೆಎಂ ವೈದ್ಯಕೀಯ ವಿದ್ಯಾಲಯ ಹಾಗೂ ಎಸ್.ಎಸ್. ಇನ್‌ಸ್ಟಿಟ್ಯೂಟ್‌ನಲ್ಲಿ 8 ವಿವಿಧ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಾಗಾರಗಳು ನಡೆಯಲಿವೆ.

ಸಂಜೆ 4.30ಕ್ಕೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಸಮ್ಮೇಳನ ಉದ್ಘಾಟಿಸಲಿದ್ದು, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಡಾ.ಬಿ.ಎಸ್. ಪ್ರಸಾದ್, ಡಾ. ಶುಕ್ಲಾ ಶೆಟ್ಟಿ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.

23ರಂದು ಬೆಳಗ್ಗೆ 8 ರಿಂದ 5.30ರ ವರೆಗೆ ವಿಚಾರಗೋಷ್ಠಿಗಳು ನಡೆಯಲಿದ್ದು, ಸಂಜೆ 7.30ಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ 2ನೇ ದಿನದ ಸಮ್ಮೇಳನ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಡಾ.ಎನ್.ಕೆ. ಕಾಳಪ್ಪನವರ್, ಬಿ. ಎಸ್. ಪ್ರಸಾದ್, ಡಾ. ಶುಕ್ಲಾ ಶೆಟ್ಟಿ, ಡಾ. ಸಂಜೀವ ಸಿಂಗ್ ರಾವತ್ ಭಾಗವಹಿಸಲಿದ್ದಾರೆ.

ದಾವಣಗೆರೆ ಮಕ್ಕಳ ತಜ್ಞ ಡಾ.ಟಿ.ಎಸ್. ಸುರೇಶ್ ಬಾಬು ಅವರನ್ನು ಗೌರವಿಸಲಾಗುವುದು. ಡಾ. ವರಿಂದರ್ ಸಿಂಗ್ ಅವರು, ಮಕ್ಕಳ ಶ್ವಾಸಕೋಶದ ಕ್ಷೇತ್ರದಲ್ಲಿ ಮಾಡಿರುವ ಅಪಾರ ಕೊಡುಗೆಯನ್ನು ಪರಿಗಣಿಸಿ ಜೀವಮಾನ ಸಾಧನೆಯ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಸಮ್ಮೇಳನಕ್ಕೆ ದೇಶದೆಲ್ಲೆಡೆಯಿಂದ 500 ಕ್ಕೂ ಹೆಚ್ಚು ಪ್ರತಿನಿಧಿಗಳು ಹಾಗೂ 120 ಸ್ನಾತಕೋತ್ತರ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು. 24ರಂದು ಬೆಳಗ್ಗೆ 9ರಿಂದ ಸಂಜೆ 3.30ರ ವರೆಗೆ ವಿವಿಧ ವಿಚಾರ ಗೋಷ್ಠಿಗಳು ನಡೆಯಲಿವೆ.

ಈ ವೇಳೆ ವೈದ್ಯರಾದ ಡಾ. ಮೂಗನಗೌಡ ಪಾಟೀಲ್, ಡಾ.ಬಿ.ಎಸ್ ಪ್ರಸಾದ್, ಡಾ.ಜಿ. ಗುರುಪ್ರಸಾದ್, ಡಾ.ಜಿ.ಎಸ್ ಲತಾ, ಡಾ.ಮಧು ಪೂಜಾರ್, ಡಾ.ವಿನಯ್ ಕುಮಾರ್ ಸುದ್ದಿಗೋಷ್ಠಿಯಲ್ಲಿದ್ದರು.



## ವಕೀಲರ ಮೇಲಿನ ಹಲ್ಲೆ ಖಂಡಿಸಿ ಮನವಿ

ಜಗಳೂರು

ಜಗಳೂರು, ನ. 21 - ತಮಿಳುನಾಡು ರಾಜ್ಯದ ಹೊಸೂರಿನ ವಕೀಲರ ಮೇಲಿನ ಮಾರಣಾಂತಿಕ ಹಲ್ಲೆ ಖಂಡಿಸಿ ತಾಲ್ಲೂಕು ವಕೀಲರ ಸಂಘದಿಂದ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ ಅವರ ಮುಖಾಂತರ ಸರ್ಕಾರಕ್ಕೆ ಲಿಖಿತ ಮನವಿ ಸಲ್ಲಿಸಲಾಯಿತು.

ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಮರೇನಹಳ್ಳಿ ಟಿ. ಬಸವರಾಜ್ ಮಾತನಾಡಿ, ತಮಿಳುನಾಡಿನಲ್ಲಿ ನ್ಯಾಯಾಲಯದ ಸಮೀಪ ವಕೀಲರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಆರೋಪಿಗಳ ವಿರುದ್ದ ಕೂಡಲೇ ಕಾನೂನು ಕ್ರಮ ಜರುಗಿಸಬೇಕು.

ವಕೀಲರಿಗೆ ದೇಶದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಭದ್ರತೆ ಒದಗಿಸಬೇಕು.

ವಕೀಲರ ಮೇಲಿನ ನಿರಂತರ ಹಲ್ಲೆ, ದೌರ್ಜನ್ಯ ಪ್ರಕರಣಗಳು ಮರುಕಳಿಸದಂತೆ ಕಾನೂನು ಸುವ್ಯವಸ್ಥೆ ಕಾಪಾಡಬೇಕು ಎಂದು ಒತ್ತಾಯಿಸಿದರು.

ಸಂದರ್ಭದಲ್ಲಿ ವಕೀಲರ ಸಂಘದ ತಾಲ್ಲೂಕು ಪದಾಧಿಕಾರಿಗಳಾದ ವಕೀಲ ರುದ್ರೇಶ್, ಸುನಿಲ್, ನಾಗೇಶ್, ಆರ್. ಓಬಳೇಶ್, ಸಣ್ಣ ಓಬಯ್ಯ, ನಾಗರಾಜ್, ಗೋಗುದ್ದು ತಿಪ್ಪೇಸ್ವಾಮಿ, ಮನೋಜ್, ರಮೇಶ್ ಇದ್ದರು.

# ಹರಪನಹಳ್ಳಿ : ಶ್ರೀ ಲಕ್ಷ್ಮಿವೆಂಕಟೇಶ್ವರ ಸ್ವಾಮಿಯ ರಥೋತ್ಸವ - ಜಾತ್ರೆ



ಹರಪನಹಳ್ಳಿ, ನ. 21 - ಬರುವ ಡಿಸೆಂಬರ್ 13 ರಿಂದ 16 ರವರಗೆ ನಡೆಯಲಿರುವ ತಾಲ್ಲೂಕಿನ ದೇವರ ತಿಮ್ಮಲಾಪುರ ಗ್ರಾಮದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಯ ರಥೋತ್ಸವ ಹಾಗೂ ಜಾತ್ರೆಯಲ್ಲಿ ಯಾವುದೇ ಅವಘಡ ನಡೆಯದಂತೆ ಮುಂಜಾಗ್ರತಾ ಕ್ರಮವನ್ನು ಅನುಸರಿಸಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಮುಜರಾಯಿ ಇಲಾಖೆ, ಗ್ರಾಮ ಪಂಚಾಯತಿ ಹಾಗೂ ಪುರಸಭೆ ಅಧಿಕಾರಿಗಳಿಗೆ ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಸೂಚಿಸಿದರು.

ಜಾತ್ರೆಯ ಹಿನ್ನೆಲೆಯಲ್ಲಿ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಕರೆದಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವಕ್ಕೆ ವಿವಿಧ ಜಿಲ್ಲೆಗಳಿಂದ ಸಹಸ್ರಾರು ಭಕ್ತರು ಆಗಮಿಸುತ್ತಾರೆ, ಜಾತ್ರೆಯ ಸಂದರ್ಭದಲ್ಲಿ ಭಕ್ತರಿಗೆ ಮಾರ್ಗ ದರ್ಶನ ನೀಡುವ ಮೂಲಕ ಸಂಚಾರ ವ್ಯವಸ್ಥೆ ಹಾಗೂ ಸ್ವಚ್ಛತೆ ಕಾಪಾಡಬೇಕು ಎಂದರು.

ದೇವಸ್ಥಾನದ ಸಮುದಾಯ ಭವನದಿಂದ ಬರುವ ತ್ಯಾಜ್ಯ ನೀರು ಗ್ರಾಮದಲ್ಲಿ ಬಂದು ದುರ್ವಾಸನೆ ಬೀರುತ್ತದೆ. ಹಾಗಾಗಿ ಕೇಸಿಂಗ್ ಪೈಪ್ ಮುಂಖಾಂತರ ಚರಂಡಿಗೆ ಸಂಪರ್ಕವನ್ನು ಕಲ್ಪಿಸುವಂತೆ ಮುಜರಾಯಿ ಅಧಿಕಾರಿಗಳಿಗೆ ಸೂಚಿಸಿದರು.

ತಹಶೀಲ್ದಾರ್ ಗಿರೀಶಬಾಬು ಮಾತನಾಡಿ, ರಥ ದುರಸ್ತಿ ಇದೆ, ನೂತನ ರಥ ನಿರ್ಮಾಣ ಮಾಡುವಂತೆ ಗ್ರಾಮದ ಮುಖಂಡರು ಮನವಿ ಮಾಡಿದ್ದು ಮುಜರಾಯಿ ಇಲಾಖೆಯ ಆದೇಶದಂತೆ ಇಲ್ಲಿನ ದೇವಸ್ಥಾನದ ಆದಾಯವನ್ನು ಇದೇ ದೇವಸ್ಥಾನಕ್ಕೆ ಬಳಕೆ ಮಾಡಲಾಗುತ್ತದೆ. ಹಾಗಾಗಿ ನೂತನ ರಥವನ್ನು ನಿರ್ಮಸಲಿಕ್ಕೆ ಹೆಚ್ಚಿನ ಹಣ ನಮ್ಮ ದೇವಸ್ಥಾನದಲ್ಲಿ ಇಲ್ಲ. ಜಾತ್ರೆಯ ಸಂದರ್ಭದಲ್ಲಿ ನೂತನ ರಥವನ್ನು ನಿರ್ಮಿಸಲು ಭಕ್ತರಿಂದ ದೇಣಿಗೆಯನ್ನು ಸಂಗ್ರಹಿಸಿ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಧರ್ಮಕರ್ತರಾದ ಡಾ. ಹರ್ಷ ಕಟ್ಟಿ, ದಂಡಿನ ಹರೀಶ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ಅಡವಿಹಳ್ಳಿ ಗ್ರಾ.ಪಂ.ಅಧ್ಯಕ್ಷೆ ಅನು ನಾಗರಾಜ, ಸದಸ್ಯ ಪ್ರಸನ್ನ ಪೂಜಾರ, ರಮೇಶ್, ರೇಣುಕಾ, ಮಂಜುನಾಥ, ಅರ್ಚಕ ಶ್ರೀನಿವಾಸ ಪೂಜಾರಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಕೃಷಿ ಚಟುವಟಿಕೆಗೆ ತಂತ್ರಜ್ಞಾನದ ಪೂರಕ ಸಂಶೋಧನೆ ಅಗತ್ಯ



## ಜಿಎಂವಿವಿ ನಾವೀನ್ಯತೆ ಮಂಡಳಿ ಸಭೆಯಲ್ಲಿ ಡಾ. ಶಶಿಧರ್ ಸಲಹೆ

ದಾವಣಗೆರೆ, ನ.21- ಪ್ರಸ್ತುತ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನಾವೀನ್ಯ ತಂತ್ರಜ್ಞಾನದ ಮುಖೇನ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಪೂರಕವಾದ ಸಂಶೋಧ ನೆಗಳನ್ನು ನಡೆಸುವಲ್ಲಿ ಹೆಚ್ಚಿನ ಗಮನ ಹರಿಸಬೇಕಾಗಿದೆ ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಡಾ. ಟಿ.ಆರ್. ಶಶಿಧರ್ ತಿಳಿಸಿದರು.

ನಗರದ ಜಿಎಂ ವಿಶ್ವವಿದ್ಯಾಲಯದಲ್ಲಿ ನಡೆದ ಸಂಶೋಧನೆ ಮತ್ತು ನಾವೀನ್ಯತಾ ಮಂಡಳಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೃಷಿ ಕ್ಷೇತ್ರ ಬಹಳ ಮಹತ್ವದ್ದಾಗಿದ್ದು, ಇತ್ತೀಚಿಗೆ ಕೂಲಿ ಕಾರ್ಮಿಕರು ಸಿಗುವುದೇ ಕಷ್ಟಕರವಾಗಿದ್ದು, ಹೆಚ್ಚಾಗಿ ಯಂತ್ರೋಪಕರಣಗಳ ಬಳಕೆ ಕಾಣಲಾಗುತ್ತಿದೆ. ಈ ಕ್ಷೇತ್ರದಲ್ಲಿ ಭೂಮಿ ಫಲವತ್ತತೆ ಮತ್ತು ಮಣ್ಣು ಪರೀಕ್ಷೆ ಸೇರಿದಂತೆ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತಿಳಿದು ಅವುಗಳಿಗೆ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ ನಾವೀನ್ಯ ತಂತ್ರಜ್ಞಾನ, ಯಂತ್ರೋಪಕರಣಗಳ ಬಳಕೆ ಮುಖೇನ ಸುಲಭೋಪಾಯದ ದಾರಿಗಾಗಿ ನಾವೀನ್ಯ ಸಂಶೋಧನಾತ್ಮಕ ಯೋಜನೆಗಳನ್ನು ರೂಪಿಸುವಂತೆ ಅವರು ಸಲಹೆ ನೀಡಿದರು.

ದಾವಣಗೆರೆ ವಿವಿ ಗಣಿತಶಾಸ್ತ್ರ ವಿಭಾಗದ ಪ್ರೊಫೆಸರ್ ಡಾ. ಪ್ರಸನ್ನಕುಮಾರ್ ಮಾತನಾಡಿ, ಸಣ್ಣ ಮೊತ್ತದ ಸಂಶೋಧನೆಗಳ ಪ್ರಾರಂಭದ ಯೋಜನೆಗಳನ್ನು ಡಾಲರ್ ಹಂತದಲ್ಲಿ ಸಂಶೋಧನೆಗಳನ್ನು ಬೆಂಬಲಿಸಬೇಕು ಮತ್ತು ಆ ಹಂತದ ಸಂಶೋಧನೆಗಳಿಗೆ ಸಿಗುವ ಬೇಡಿಕೆ, ಅವುಗಳಿಂದ ಆಗುವ ಅನುಕೂಲತೆ ಬಗ್ಗೆ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದರು.

ಡೀನ್ ಡಾ. ಕೆ.ಎನ್. ಭರತ್ ಸಂಶೋಧನೆ ಮತ್ತು ನಾವೀನ್ಯತಾ ವಿಭಾಗದ ಯೋಜನೆ ಮತ್ತು ಕಾರ್ಯಗಳ ಕುರಿತು ವಿವರಣೆ ನೀಡುತ್ತಾ, ಹಿಂದಿನ ಸಭೆಯಲ್ಲಿ ನೀಡಿದ ಸಲಹೆಗಳಿಗೆ ಪೂರಕವಾಗಿ ಅನುಷ್ಠಾನಗೊಂಡ ಕಾರ್ಯಕ್ರಮಗಳನ್ನು ವಿವರಿಸಿ, ಜಿಎಂ ವಿಶ್ವವಿದ್ಯಾನಿಲಯವು 2023-24ರ ಶೈಕ್ಷಣಿಕ ವರ್ಷದಿಂದ ಪಿಹೆಚ್ ಡಿ ಕಾರ್ಯಕ್ರಮಕ್ಕೆ ಪ್ರವೇಶವನ್ನು ಪ್ರಾರಂಭಿಸಿದೆ ಎಂದು ತಿಳಿಸಿದರು.

ಆನ್ ಲೈನ್ ಸಂಪರ್ಕ ಮುಖೇನ ಬೆಳಗಾವಿ ಘಾಟ್ಗೆ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರೊಫೆಸರ್ ಡಾ. ವಿಜಯ್ ಪುರೋಹಿತ್ ಭಾಗವಹಿಸಿದ್ದರು.

ಸಭೆಯಲ್ಲಿ ಜಿಎಂ ವಿವಿ ಕುಲಪತಿ ಡಾ. ಎಸ್.ಆರ್. ಶಂಕಪಾಲ್, ಸಹ ಕುಲಪತಿ ಡಾ. ಎಚ್.ಡಿ. ಮಹೇಶಪ್ಪ, ಕುಲಸಚಿವ ಡಾ. ಬಿ.ಎಸ್. ಸುನಿಲ್ ಕುಮಾರ್, ಸೀನಿಯರ್ ಡೀನ್ ಡಾ. ಕೆ. ಕರಿಬಸಪ್ಪ, ಜಿಎಂಐಟಿ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಬಿ. ಸಂಜಯ್ ಪಾಂಡೆ, ಎಫ್‌ಬಿಎಎಸ್ ವಿಭಾಗದ ಡೀನ್ ಡಾ. ಬಿ.ಎಂ. ಸಂತೋಷ್, ಫ್ಯಾಕಲ್ಟಿ ಆಫ್ ಕಂಪ್ಯೂಟಿಂಗ್ ಅಂಡ್ ಐಟಿ ವಿಭಾಗದ ಡೀನ್ ಡಾ. ಶ್ವೇತಾ ಮರೀಗೌಡರ್, ಜಿಎಂ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ. ಗಿರೀಶ್ ಬೋಳಕಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವೀರನಗೌಡಗೆ ಹೈ ವೈಬ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಪ್ರಶಸ್ತಿ



ದಾವಣಗೆರೆ, ಅ.21- ಹಾವೇರಿ ತಾಲ್ಲೂಕು ಸೋಮನಕಟ್ಟಿಯ ಸಾಹಿತಿ ವೀರನಗೌಡ ಪಾಟೀಲ ಅವರಿಗೆ 'ಹೈ ವೈಬ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್' ಎಂಬ ಪ್ರಶಸ್ತಿ ಲಭಿಸಿದೆ.

ವಿನೂತನ ಬರಹದಿಂದಾಗಿ ವಿಶ್ವದಾಖಲೆ ಪ್ರಶಸ್ತಿ ಪಡೆದಿದ್ದು, ಕನ್ನಡದಲ್ಲಿ ಮುಮ್ಮುಖ ಹಾಗೂ ಹಿಮ್ಮುಖವಾಗಿಯೂ ಓದಬಲ್ಲಂತಹ 5 ಸಾವಿರ ದ್ವಿಮುಖ ವಾಕ್ಯಗಳನ್ನು ರಚಿಸಿ ವಿಶ್ವ ದಾಖಲೆ ಪುಟ ಸೇರಿದ್ದಾರೆ. ಈ ವಾಕ್ಯಗಳನ್ನು ಎಡದಿಂದ ಹಾಗೂ ಬಲದಿಂದ ಓದಿದರೂ ಅರ್ಥ ಉಚ್ಚಾರಣೆ ಒಂದೇ ರೀತಿ ಇರುವುದು ಇವುಗಳ ವಿಶೇಷತೆಯಾಗಿದೆ.

# ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್‌ನಲ್ಲಿ ಇಂದು ಕನ್ನಡ ರಾಜ್ಯೋತ್ಸವ ಸಮಾರಂಭ

**ದಾವಣಗೆರೆ:** ಇಂದು ಬೆಳಗ್ಗೆ 10ಕ್ಕೆ ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್, ಮಲ್ಟಿ ಪರ್ಪಸ್ ಹಾಲ್‌ನಲ್ಲಿ ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್ ಹಾಗೂ ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್ ವತಿಯಿಂದ ಕನ್ನಡ ರಾಜ್ಯೋತ್ಸವ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲ ಹರ್ಷ ಕೆ.ಎಂ. ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎವಿಕೆ ಮಹಿಳಾ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ।। ಗೀತಾ ಬಸವರಾಜ್, ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್ ಪ್ರಾಂಶುಪಾಲರಾದ ನರ್ಮದಾ ಭಾಗವಹಿಸಲಿದ್ದಾರೆ.

# ಇಂದು ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯ ಪ್ರತಿಭಾ ಪುರಸ್ಕಾರ

**ದಾವಣಗೆರೆ:** ಅನುಭವಮಂಟಪ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ 2023-24ನೇ ಸಾಲಿನ ವಿದ್ಯಾರ್ಥಿ ಸಂಘದ ಸಮಾರೋಪ, ದೀಪದಾನ ಹಾಗೂ ಪ್ರತಿಭಾ ಪುರಸ್ಕಾರವನ್ನು ಇಂದು ಬೆಳಗ್ಗೆ 10ಕ್ಕೆ ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ಕಾಲೇಜಿನ ಸಲಹಾ ಸಮಿತಿ ಅಧ್ಯಕ್ಷ ಪ್ರೊ. ಬಿ. ಸಿದ್ದಲಿಂಗಯ್ಯ ವಹಿಸಲಿದ್ದಾರೆ. ಸಮಾರೋಪ ಭಾಷಣವನ್ನು ಸಾಹಿತಿಗಳು ಹಾಗೂ ಎಂ.ಬಿ.ಆರ್. ಪ್ರಥಮ ದರ್ಜೆ ಕಾಲೇಜಿನ ವಿಶ್ರಾಂತ ಪ್ರಾಚಾರ್ಯರಾದ ಡಾ. ನಾ. ಲೋಕೇಶ ಒಡೆಯರ್ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶ್ರೀ ತರಳಬಾಳು ಜಗದ್ಗುರು ರೆಸಿಡೆನ್ಷಿಯಲ್ ಸ್ಕೂಲ್‌ನ ಆಡಳಿತಾಧಿಕಾರಿ ಡಾ. ಹೆಚ್. ಮಲ್ಲಿಕಾರ್ಜುನಪ್ಪ, ಎಂ.ಎಂ. ಶಿಕ್ಷಣ ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಕೆ.ಟಿ. ನಾಗರಾಜ ನಾಯ್ಕ, ಉಪಸ್ಥಿತರಿರುವರು.

## 24 ರಂದು ಜಿಎಂಐಟಿ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ

ದಾವಣಗೆರೆ, ನ. 21- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಎಂಬಿಎ ವಿಭಾಗದ ವತಿಯಿಂದ ಇದೇ ದಿನಾಂಕ 24 ರಂದು ಬೆಳಿಗ್ಗೆ 10.30 ಕ್ಕೆ ಕಾಲೇಜಿನ ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ ಹಳೇ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮ ನಡೆಯಲಿದೆ ಎಂದು ಕಾಲೇಜಿನ ಎಂಬಿಎ ವಿಭಾಗದ ಮುಖ್ಯಸ್ಥ ಡಾ.ಟಿ.ಎಸ್. ಬಸವರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿ.ಎಂ. ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ಆರ್. ಶಂಕಪಾಲ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಎಂಐಟಿ ಕಾಲೇಜಿನ ಪ್ರಾಚಾರ್ಯ ಡಾ. ಎಂ.ಬಿ. ಸಂಜಯ್ ಪಾಂಡೆ, ಎಂಬಿಎ ವಿಭಾಗದ ನಿರ್ದೇಶಕ ಡಾ.ಬಿ. ಬಕ್ಕಪ್ಪ ಭಾಗವಹಿಸಲಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಐ. ವಿನಯ್, ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ಪ್ರೊ. ಟಿ.ಆರ್. ತೇಜಸ್ವಿ ಕಟ್ಟಿಮನಿ, ಸಹಾಯಕ ಪಿಆರ್‌ಓ ವಸಂತಕುಮಾರ್ ಉಪಸ್ಥಿತರಿದ್ದರು.

# ಬಾಲ್ಯವಿವಾಹಕ್ಕೆ ಸಹಕರಿಸುವ ಪೋಷಕರ ವಿರುದ್ಧ ಎಫ್‌ಐಆರ್: ನ್ಯಾ.ರಾಜೇಶ್ವರಿ ಹೆಗಡೆ



ದಾವಣಗೆರೆ, ನ. 21 - ಅನಿಷ್ಟ ಪದ್ಧತಿಯಾದ ಬಾಲ್ಯವಿವಾಹಕ್ಕೆ ಸಹಕಾರ ನೀಡುವ ಪೋಷಕರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಮಟ್ಟದ ಟಾಸ್ಕ್ ಪೋರ್ಸ್ ಸಮಿತಿ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್.ಹೆಗಡೆ ತಿಳಿಸಿದರು.

ಅವರು ಶುಕ್ರವಾರ ಜಿಲ್ಲಾ ನ್ಯಾಯಾಲಯದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ದ್ವೈಮಾಸಿಕ ಸಭೆ, ಜಿಲ್ಲಾ ಮಟ್ಟದ ಪೋಕ್ಸೋ ಸಭೆ, ವಿಶೇಷ ಕಾರ್ಯಪಡೆ ಸಭೆ, ಯುಟಿಆರ್‌ಸಿ ಸಭೆ, ಬಾಲನ್ಯಾಯ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

20 ಬಾಲ್ಯ ವಿವಾಹ ದೂರುಗಳು ದಾಖಲಾಗಿದ್ದು, ಈ ಪೈಕಿ 16 ಅನ್ನು ತಡೆಯಲಾಗಿದೆ ಹಾಗೂ 4 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ ಎಲ್ಲಾ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಲು ಕ್ರಮ ವಹಿಸಬೇಕು. ಬಾಲ್ಯ ವಿವಾಹ ಪ್ರಕರಣಗಳಲ್ಲಿ ಸಹಕಾರ ನೀಡುವ ಎರಡೂ ಕಡೆಯ ಪೋಷಕರ ಮೇಲೆ ಎಫ್‌ಐಆರ್ ದಾಖಲಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಎಲ್ಲಾ ಶಾಲಾ-ಕಾಲೇಜುಗಳ ಸೂಚನಾ ಫಲಕಗಳಲ್ಲಿ ಬಾಲ್ಯ ವಿವಾಹ ನಿಷೇಧ, ಪೋಕ್ಸೋ ಕಾಯ್ದೆ, ಮಾನವ ಕಳ್ಳಸಾಗಣೆ ತಡೆ, ಬಾಲನ್ಯಾಯ ಮಂಡಳಿ ಸೇರಿದಂತೆ, ಸಹಾಯಕ್ಕಾಗಿ ಇರುವ ವಿವರಗಳು ಮತ್ತು ತುರ್ತು ಸಂಪರ್ಕಕ್ಕಾಗಿ ಇರುವ ಸಹಾಯವಾಣಿಗಳ ಮಾಹಿತಿಯನ್ನು ಪ್ರಕಟಿಸಬೇಕು ಎಂದೂ ಅವರು ತಿಳಿಸಿದರು.

ಶಾಲಾ – ಕಾಲೇಜುಗಳು ಬಾಲ್ಯವಿವಾಹ ತಡೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಈ ಕುರಿತ ದಾಖಲೆಗಳನ್ನು ಕಾನೂನು ಸೇವಾ ಪ್ರಾಧಿಕಾರಕ್ಕೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕಡ್ಡಾಯವಾಗಿ ನೀಡಬೇಕು ಎಂದು ಸೂಚನೆ ನೀಡಿದರು.

ಬಾಲ್ಯ ವಿವಾಹವಾಗಿ ಗರ್ಭಿಣಿಯಾಗಿ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಾಗ ತಾಯಿ ಕಾರ್ಡ್ ನೀಡುವಾಗ ಆರ್‌ಸಿಹೆಚ್ ಪೋರ್ಟಲ್‌ನಲ್ಲಿ ವಿವರ ದಾಖಲಿಸಲಾಗುತ್ತದೆ. ಬಾಲ್ಯ ವಿವಾಹವಾಗಿದ್ದಲ್ಲಿ, ಆಸ್ಪತ್ರೆ ವೈದ್ಯಾಧಿಕಾರಿಗಳು ಕೂಡಲೇ ಸಂಬಂಧಿಸಿದ ಇಲಾಖೆ ಗಮನಕ್ಕೆ ತರಬೇಕಾಗುತ್ತದೆ. ಒಂದು ವೇಳೆ ಮಾಹಿತಿಯನ್ನು ಮುಚ್ಚಿಡುವ ವೈದ್ಯರ ಮೇಲೆ ಪೋಕ್ಸೋ ಅಡಿ ಪ್ರಕರಣ ದಾಖಲಿಸಿ ಶಿಕ್ಷೆ ವಿಧಿಸುವ ಅವಕಾಶ ಇದೆ ಎಂದು ಎಚ್ಚರಿಸಿದರು.

ಬರುವ ಡಿಸೆಂಬರ್ 14 ರಂದು ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದ್ದು ಅಷ್ಟರೊಳಗಾಗಿ ಎಲ್ಲಾ ರಾಜಿಯಾಗಬಲ್ಲ ಪ್ರಕರಣಗಳನ್ನು ಪಟ್ಟಿ ಮಾಡಿ ಇತ್ಯರ್ಥಕ್ಕೆ ಕ್ರಮ ವಹಿಸಬೇಕು. ಇಲಾಖೆಗಳು ಈ ಬಗ್ಗೆ ಹೆಚ್ಚಿನ ಗಮನ ವಹಿಸಬೇಕು ಎಂದು ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಸಭೆಯಲ್ಲಿ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಮ.ಕರೆಣ್ಣವರ, ಪೊಲೀಸ್ ಅಧೀಕ್ಷಕಿ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಉಪಕಾರ್ಯದರ್ಶಿ ಕೃಷ್ಣನಾಯ್ಕ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಎಂ.ಸಂತೋಷ್, ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಗಳಿಸಿದ ವಿದ್ಯೆಯನ್ನು ಯಾರೂ ಅಪಹರಿಸಲು ಸಾಧ್ಯವಿಲ್ಲ




ಮಲೇಬೆನ್ನೂರಿನಲ್ಲಿ ಅಕ್ಷರ ತಾಯಿ ಲೂಸಿ ಸಾಲ್ಡಾನ

ಮಲೇಬೆನ್ನೂರು, ನ.21- ನಾವು ಮಾಡಿದ ಆಸ್ತಿಯನ್ನು ಅಪಹರಿಸಲು ಅನೇಕರು ಪ್ರಯತ್ನಿಸಬಹುದು. ಆದರೆ, ನಾವು ಗಳಿಸಿದ ವಿದ್ಯೆಯನ್ನು ಯಾರೂ ಅಪಹರಿಸಲು ಸಾಧ್ಯವಿಲ್ಲ ಎಂದು ಧಾರವಾಡದ ಅಕ್ಷರ ತಾಯಿ ಲೂಸಿ ಸಾಲ್ಡಾನ ಅಭಿಪ್ರಾಯಪಟ್ಟರು.

ದೊಗ್ಗಳ್ಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ನಡೆದ ಕಲಿಕೆಯ ಪರಿಣಾಮಗಳು ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದ ಅವರು, ತಮ್ಮ ಅನುಭವದಲ್ಲಿ ವಿದ್ಯೆಯಿಂದ ಆದ ಉಪಯೋಗದ ಕುರಿತು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು.

ಮಕ್ಕಳಿಗೆ ವಿದ್ಯಾದಾನ ನೀಡುವ ಜೊತೆಗೆ ಸರ್ಕಾರಿ ಶಾಲೆಗಳಿಗೆ ಲಕ್ಷಾಂತರ ರೂಪಾಯಿ ದತ್ತಿ ನೀಡುವ ಮೂಲಕ ಧಾರವಾಡ ಜಿಲ್ಲೆಯಲ್ಲಿ ಮನೆ ಮಾತಾಗಿರುವ ಲೂಸಿ ಸಾಲ್ಡಾನ ಅವರು ದೊಗ್ಗಳ್ಳಿ ಶಾಲೆಗೆ ದತ್ತಿ ನೀಡುವ ಯೋಜನೆ ಹೊಂದಿದ್ದು, ಆ ಮೂಲಕ ಹರಿಹರ ತಾಲ್ಲೂಕಿನಲ್ಲಿ ತಮ್ಮ ದತ್ತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆಂದು ಎಂದು ಧಾರವಾಡ ಜಿಲ್ಲೆಯ ಶಿಕ್ಷಕ ಲಕ್ಕಮ್ಮನವರ್ ತಿಳಿಸಿದರು.

ಮುಖ್ಯೋಪಾಧ್ಯಾಯ ಹೆಚ್.ಮಲ್ಲಿಕಾರ್ಜುನಪ್ಪ ಅಧ್ಯಕ್ಷತೆ ವಹಿಸಿದ್ದರು.

ಧಾರವಾಡದ ಸಮಾಜಸೇವಕ ಮಲ್ಲಪ್ಪ, ಶಾಲೆಯ ಶಿಕ್ಷಕರಾದ ಹೆಚ್. ಚಂದ್ರಪ್ಪ, ಸುಶೀಲಮ್ಮ, ಸಬಿಯಾ ಪರ್ವಿನ್, ನಾಗರತ್ನಮ್ಮ, ಶರತ್ ಬಾಬು, ಶಿಲ್ಪಾ, ಪುಷ್ಪಾವತಿ, ಅಡುಗೆ ಸಿಬ್ಬಂಧಿಗಳಾದ ಜ್ಯೋತಿ, ನೇತ್ರಾವತಿ, ಮಂಜಮ್ಮ, ಆಯಾ ನಾಗಮ್ಮ ಸೇರಿದಂತೆ ಅನೇಕರು ಈ ವೇಳೆ ಹಾಜರಿದ್ದರು.

ಈಗಾಗಲೇ ಪುನರಾರಂಭಗೊಂಡಿದೆ
ಹೋಟೆಲ್ ದ್ವಾರಕಾ
ಖಾಸಗಿ (ಹಳೇ)ಬಸ್ ನಿಲ್ದಾಣದ ಎದುರು,
ಪಿ.ಬಿ. ರಸ್ತೆ, ದಾವಣಗೆರೆ.
ದೂರವಾಣಿ : 08192 259025

ಅಭಿನಂದನೆಗಳು



ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಸದಸ್ಯ ಸ್ಥಾನಕ್ಕೆ ಕಳೆದ ಮಂಗಳವಾರದಂದು ನಡೆದಿದ್ದ ಚುನಾವಣೆಯಲ್ಲಿ ಇಂದು ನಡೆದ ಮತ ಎಣಿಕೆಯಲ್ಲಿ ಅತ್ಯಧಿಕ ಮತಗಳಿಂದ ವಿಜಯ ಸಾಧಿಸಿದ
ಶ್ರೀ ಅನ್ವರ್ ಬಾಷಾ ಕೆ. ಅವರಿಗೆ ತುಂಬು ಹೃದಯದ ಅಭಿನಂದನೆಗಳು.





ದಸ್ತಗೀರ್ ಎಸ್ ಅಸಾದುಲ್ಲಾ
ಅಧ್ಯಕ್ಷರು
ಕನ್ನಡ ನಾಡು ಜನತಾ ಸಮಿತಿ
ದಾವಣಗೆರೆ.



# ವಿದ್ಯಾರ್ಥಿಗಳ ಮನೋಲ್ಲಾಸಕ್ಕಾಗಿ ಪುಸ್ತಕ ಓದಿ

## 'ಮೊಬೈಲ್ ಬಿಡಿ, ಪುಸ್ತಕ ಹಿಡಿ' ಪುಸ್ತಕ ಪ್ರದರ್ಶನ ಕಾರ್ಯಕ್ರಮದಲ್ಲಿ ತಿಪ್ಪೇಸ್ವಾಮಿ

ದಾವಣಗೆರೆ, ನ.21- ವಿದ್ಯಾರ್ಥಿಗಳು ಮನಸ್ಸಿನ ಉಲ್ಲಾಸಕ್ಕೆ ಪಠ್ಯದ ಜತೆಗೆ ಸಾಹಿತ್ಯಿಕ ಪುಸ್ತಕ ಓದಬೇಕು ಎಂದು ಗ್ರಂಥಾಲಯ ಇಲಾಖೆ ಉಪ ನಿರ್ದೇಶಕ ತಿಪ್ಪೇಸ್ವಾಮಿ ಹೇಳಿದರು.

ಗ್ರಂಥಾಲಯ ಇಲಾಖೆ ಮತ್ತು ಮಾಹಿತಿ ಕೇಂದ್ರ ಹಾಗೂ ಕಾಲೇಜಿನ ಅಭಿರುಚಿ ಓದುಗರ ವೇದಿಕೆ ಸಹಯೋಗದಲ್ಲಿ ನಗರದ ಎವಿಕೆ ಕಾಲೇಜು ಆವರಣದಲ್ಲಿ ಗ್ರಂಥಾಲಯ ಸಪ್ತಾಹ ಅಂಗವಾಗಿ ಬುಧವಾರ ಏರ್ಪಡಿಸಿದ್ದ 'ಮೊಬೈಲ್ ಬಿಡಿ, ಪುಸ್ತಕ ಹಿಡಿ' ಪುಸ್ತಕ ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪುಸ್ತಕ ಓದುವ ಹವ್ಯಾಸ ಬೆಳೆಸುವ ನಿಟ್ಟಿನಲ್ಲಿ ಹಾಗೂ ಓದುಗರನ್ನು ಗ್ರಂಥಾಲಯಗಳತ್ತ ಸೆಳೆಯಬೇಕೆಂಬ ಸದುದ್ದೇಶದೊಂದಿಗೆ ಪ್ರತಿ ವರ್ಷ ಗ್ರಂಥಾಲಯ ಸಪ್ತಾಹದ ಪ್ರಯುಕ್ತ ಚಿತ್ರಕಲೆ, ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗುತ್ತಿದೆ. ಅಲ್ಲದೇ, ಪುಸ್ತಕದ ಟೈಟಲ್ ನೋಡಿ, ಅದನ್ನು ಓದಬೇಕೆಂಬ ಅಭಿರುಚಿ ಬೆಳೆಯಲಿ ಎಂಬ ಆಶಯದೊಂದಿಗೆ ಪುಸ್ತಕ ಪ್ರದರ್ಶನ ಸಹ ಆಯೋಜಿಸಲಾಗಿದೆ ಎಂದರು.

ಗ್ರಾಮ ಪಂಚಾಯಿತಿ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲೂ ಗ್ರಂಥಾಲಯಗಳಿದ್ದು, ಓದುಗರು ಇವುಗಳನ್ನು ಸದುಪಯೋಗ ಪಡಿಸಿಕೊಳ್ಳು ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ನಿವೃತ್ತ ಡಿವೈಎಸ್ಪಿ ಟಿ.ಎಸ್. ಮುರುಗಣ್ಣವರ್ ಮಾತನಾಡಿ, ವಿದ್ಯಾರ್ಥಿಗಳು ಒಳ್ಳೆಯದಕ್ಕೆ ಮಾತ್ರ ಮೊಬೈಲ್ ಬಳಸಬೇಕು. ಕೆಟ್ಟದ್ದರ ಕಡೆ ಮನಸ್ಸು ಕೊಡಬಾರದು ಎಂದರು.

2022-23ರ ಸಾಲಿನಲ್ಲಿ ದೇಶದಲ್ಲಿ ಸೈಬರ್ ಕ್ರೈಂ ಮೂಲಕ 72ಸಾವಿರ ಕೋಟಿ ರೂ. ಮೊತ್ತ ವಂಚಿಸಲಾಗಿದ್ದು, ಸಾರ್ವಜನಿಕರು ಈ ಬಗ್ಗೆ ಎಚ್ಚರ ವಹಿಸಬೇಕಾಗುತ್ತದೆ. ನಿಮ್ಮ ಗಮನಕ್ಕೆ ಬಾರದೆಯೇ ಬ್ಯಾಂಕ್ ಖಾತೆಯಿಂದ ಹಣ ಕಟಾವಣೆಯಾಗಿದ್ದರೆ, 1930 ಸಹಾಯ ವಾಣಿಗೆ ಕರೆ ಮಾಡಿ ದೂರು ನೋಂದಾಯಿಸಿದ ಬಳಿಕ ಬ್ಯಾಂಕ್‌ಗೆ ಹೋಗಿ ನಿಮ್ಮ ಖಾತೆಯನ್ನು ಫ್ರೀಜ್ ಮಾಡಿಸಬೇಕು ಎಂದರು.

ನಿಮಗೆ ಆಮಿಷ ತೋರಿಸುವ, ಬೆದರಿಸುವ ಕರೆ ಬಂದರೆ, ಸ್ಥಳೀಯ ಪೊಲೀಸ್ ಠಾಣೆಯಿಂದ ಮಾಹಿತಿ ಪಡೆದು ಹೇಳಿವುದಾಗಿ ಹೇಳಿದರೆ, ವಂಚಕರು ನಿಮ್ಮ ಸಹವಾಸಕ್ಕೆ ಬರುವುದಿಲ್ಲ ಎಂದು ಮುರುಗಣ್ಣವರ್ ತಿಳಿಸಿದರು.

ಕಾಲೇಜಿನ ಪ್ರಾಚಾರ್ಯೆ ಕಮಲಾ ಸೊಪ್ಪಿನ್, ಐಕ್ಯೂಎಸಿ ಸಂಯೋಜಕ ಆರ್.ಆರ್. ಶಿವಕುಮಾರ್ ಇದ್ದರು. ಹಿರಿಯ ವಿದ್ಯಾರ್ಥಿನಿ ಮಮತಾ ಸೈಬರ್ ಕ್ರೈಂನಲ್ಲಿ ತಾನು ವಂಚನೆಗೊಳಗಾಗಿ ಬಳಿಕ ನ್ಯಾಯ ಪಡೆದ ಬಗೆಯನ್ನು ವಿವರಿಸಿದರು. ಗ್ರಂಥಪಾಲಕ ಸತೀಶ್ ಪ್ರಾಸ್ತಾವಿಕ ಮಾತನಾಡಿದರು.

# ವಕೀಲನ ಕೊಲೆ : ನಗರದಲ್ಲಿ ವಕೀಲರ ಪ್ರತಿಭಟನೆ




ದಾವಣಗೆರೆ, ನ.21- ರಾಜ್ಯದ ಗಡಿಗೆ ಹೊಂದಿಕೊಂಡಿರುವ ಹೊಸೂರಿನಲ್ಲಿ ನಿನ್ನೆ ಹಾಡುಹಗಲೇ ನಡೆದ ವಕೀಲ ಕಣ್ಣನ್ ಅವರ ಕೊಲೆಯನ್ನು ಖಂಡಿಸಿರುವ ಜಿಲ್ಲಾ ವಕೀಲರ ಸಂಘದ ನೇತೃತ್ವದಲ್ಲಿ ನಗರದ ವಕೀಲರು ಇಂದು ಬೃಹತ್ ಪ್ರತಿಭಟನೆ ನಡೆಸಿದರು.

ಈ ಘಟನೆಯಿಂದ ವಕೀಲರಿಗೆ ಯಾವುದೇ ಭದ್ರತೆ ಇಲ್ಲದೇ ಭಯದಲ್ಲಿ ನ್ಯಾಯಾಲಯಗಳಲ್ಲಿ ಹಾಜರಾಗುವಂತೆ ಹಾಗೂ ಭಯಭೀತರಾಗಿ ಓಡಾಡುವ ಪರಿಸ್ಥಿತಿ ಉಂಟಾಗಿದೆ ಎಂದು ವಕೀಲರು ಆತಂಕ ವ್ಯಕ್ತಪಡಿಸಿದ್ದಾರೆ.

ವಕೀಲರು ಘಟನೆಯನ್ನು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಸಭೆ ಸೇರಿ ಮಾನವ ಸರಪಳಿಯೊಂದಿಗೆ ಖಂಡಿಸಿದರು.

ನ್ಯಾಯಾಲಯ ಆವರಣದಲ್ಲಿ ಮಾರಣಾಂತಿಕ ಹಲ್ಲೆ ಮಾಡಿದವರ ವಿರುದ್ಧ ಹಾಗೂ ಕೃತ್ಯದಲ್ಲಿ ಭಾಗಿಯಾದವರನ್ನು ಈ ಕೂಡಲೇ ಬಂಧಿಸಿ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರಿಗೆ ಮನವಿ ಸಲ್ಲಿಸಿ, ಸಂಬಂಧಪಟ್ಟ ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಬೇಕೆಂದು ಹಾಗೂ ವಕೀಲರಿಗೆ ಸೂಕ್ತ ಭದ್ರತೆ ಒದಗಿಸಿಕೊಡಬೇಕೆಂದು ಈ ಮೂಲಕ ಮನವಿ ಸಲ್ಲಿಸಲಾಯಿತು.

ನಂತರ ನ್ಯಾಯಾಲಯದ ಆವರಣದಲ್ಲಿ ಧರಣಿ ನಡೆಸಿ, ಕಣ್ಣನ್ ಎಂಬ ವಕೀಲರನ್ನು ಕೊಲೆ ಮಾಡಿದ ಪಾತಕಿಗೆ ಗಲ್ಲು ಶಿಕ್ಷೆ ವಿಧಿಸುವಂತೆ ಆಗ್ರಹಿಸಿದರು. ನಂತರ ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ಬಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಆರೋಗ್ಯಕರ ಸಮಾಜದ ರಕ್ಷಣೆಗಾಗಿ ಸೇವೆ ಸಲ್ಲಿಸುತ್ತಿರುವ ವಕೀಲರ ಮೇಲೆ ಇಂತಹ ಘಟನೆಗಳು ನಡೆಯುತ್ತಿದ್ದು, ವಕೀಲರಿಗೆ ರಕ್ಷಣೆ ಇಲ್ಲದಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್, ಕಾರ್ಯದರ್ಶಿ ಎಸ್. ಬಸವರಾಜ್, ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್, ಬಸವರಾಜ್ ಎಸ್., ಸಹ ಕಾರ್ಯದರ್ಶಿ ಎ.ಎಸ್. ಮಂಜು ನಾಥ್, ಬಿ. ಅಜ್ಜಯ್ಯ ಆವರಗೆರೆ, ಭಾಗ್ಯಲಕ್ಷ್ಮಿ ಆರ್., ಚೌಡಪ್ಪ, ಮಧುಸೂದನ್ ಟಿ.ಹೆಚ್., ನಾಗರಾಜ್ ಎಲ್., ನೀಲಕಂಠಯ್ಯ ಕೆ.ಎಂ., ರಾಘವೇಂದ್ರ ಎಂ., ಸಂತೋಷ್ ಕುಮಾರ್ ಜಿ.ಜೆ., ಕಾರ್ಯಕಾರಿ ಸಮಿತಿ ಸದಸ್ಯ ವಾಗೀಶ್ ಕಟಗಿಹಳ್ಳಿ ಮಠ, ಹಿರಿಯ ವಕೀಲರುಗಳಾದ ಎ.ಸಿ. ಜಗದೀಶ್ವರ್, ಎನ್. ಶಿವಲಿಂಗಪ್ಪ, ಬಿ.ಎಂ. ಹನುಮಂತಪ್ಪ, ಎಲ್. ದಯಾನಂದ್, ಗುಮ್ಮನೂರು ಮಲ್ಲಿಕಾರ್ಜುನ್, ಹೆಚ್.ದಿವಾಕರ್, ಎ.ಸಿ. ರಾಘವೇಂದ್ರ, ಹೆಚ್.ಎಸ್. ಯೋಗೇಶ್, ಎ.ವೈ. ಪ್ರಕಾಶ್, ರಿಜ್ವಿಖಾನ್, ನಜೀರ್ ಅಹಮದ್, ಹಲಗೇರಿ ಮಂಜಪ್ಪ ಸೇರಿದಂತೆ ವಕೀಲರ ಸಂಘದ ಎಲ್ಲಾ ಸದಸ್ಯರು ಭಾಗವಹಿಸಿದ್ದರು.

# ಉಕ್ಕಿಗಾಗಿ ಐಐಎಸ್‌ಸಿ ಜೊತೆ ಸಹಭಾಗಿತ್ವ : ಕುಮಾರಸ್ವಾಮಿ ಸಲಹೆ

ಬೆಂಗಳೂರು, ನ. 21 - ಉಕ್ಕು ಉತ್ಪಾದಕರು ಜಾಗತಿಕವಾಗಿ ಸ್ಪರ್ಧೆ ನಡೆಸಲು ಹಾಗೂ ತಾಂತ್ರಿಕವಾಗಿ ಮುಂದುವರೆಯಲು ಐ.ಐ.ಎಸ್.ಸಿ. ರೀತಿಯ ಸಂಸ್ಥೆಗಳ ಜೊತೆ ಸಹಭಾಗಿತ್ವ ಹೊಂದಬೇಕಿದೆ ಎಂದು ಕೇಂದ್ರ ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಭಾರತದ ಉಕ್ಕು ವಲಯವು ಕೈಗಾರಿಕೆಗೆ ಬೆನ್ನೆಲುಬಾಗಿದೆ. ಗಗನಚುಂಬಿ ಕಟ್ಟಡಗಳಿಂದ ಹಿಡಿದು ಹೆದ್ದಾರಿ, ರಕ್ಷಣೆಯವರೆಗೆ ಉಕ್ಕು ನಮ್ಮ ಪ್ರಗತಿಗೆ ಕಾರಣವಾಗಿದೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ನ್ಯಾಷನಲ್ ಮೆಟಲರ್ಜಿಸಿಸ್ಟ್ ಅವಾರ್ಡ್ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

# ಐಎಂಎ ಮಹಿಳಾ ವಿಭಾಗದಿಂದ ರಾಜ್ಯೋತ್ಸವ



ದಾವಣಗೆರೆ, ನ. 21- ನಗರದ ಐಎಂಎ ಮಹಿಳಾ ವಿಭಾಗದಿಂದ ವಾರ್ಷಿಕ ಮಹಾಸಭೆ ಮತ್ತು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ನಡೆಸಲಾಯಿತು. ಐಎಂಎ ಸದಸ್ಯರಿಗೆ ಆಟದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಲೀಲಾ ಮರುಳಯ್ಯ, ಮಂಜುಳ ಗೌಡ, ಉಷಾ ರೇಣುಕಾನಂದ, ಶಿಲ್ಪ ನವೀನ್ ಮತ್ತು ವಿಜಯಲಕ್ಷ್ಮಿ ಚಂದ್ರಪ್ಪ ನಡೆಸಿಕೊಟ್ಟರು ಐಎಂಎ ಮಹಿಳಾ ವಿಭಾಗದ ಅಧ್ಯಕ್ಷರಾದ ತ್ರಿವೇಣಿ ಮಲ್ಲೇಶ್, ಕಾರ್ಯದರ್ಶಿ ಶಿವಪ್ರಭ, ಖಜಾಂಚಿ ವಾಸಂತಿ ಮತ್ತು ಇತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ವಕ್ಫ್ ವಿವಾದ : ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ

ಬೆಂಗಳೂರು, ನ. 21 – ವಕ್ಫ್ ವಿವಾದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸಿದೆ.

'ನಮ್ಮ ಭೂಮಿ, ನಮ್ಮ ಹಕ್ಕು' ಎಂಬ ಘೋಷಣೆ ಮೊಳಗಿಸುತ್ತಾ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದ್ದಾರೆ. ರಾಜ್ಯದ ಹಲವೆಡೆ ವಕ್ಫ್ ಮಂಡಳಿ ಜಮೀನು ಕಬಳಿಸುತ್ತಿದೆ ಎಂದು ಬಿಜೆಪಿ ನಾಯಕರು ಆರೋಪಿಸಿದ್ದಾರೆ.

ಕಲಬುರಗಿ, ಬಳ್ಳಾರಿ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಉಡುಪಿ ಸೇರಿದಂತೆ ಹಲವೆಡೆ ಪ್ರತಿಭಟನೆ ನಡೆಸಲಾಗಿದೆ. ಪ್ರತಿಭಟನೆಯಲ್ಲಿ ಹಲವಾರು ಸ್ವಾಮೀಜಿಗಳೂ ಸಹ ಪಾಲ್ಗೊಂಡಿದ್ದರು. 1974ರಲ್ಲಿ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ಹೊರಡಿಸಲಾದ ಗೆಜೆಟ್ ಅಧಿಸೂಚನೆ ವಾಪಸ್ ಪಡೆಯಬೇಕು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಒತ್ತಾಯಿಸಿದೆ.

ವಕ್ಫ್‌ಗೆ ಸಂಬಂಧಿಸಿದಂತೆ ರೈತರಿಗೆ ಹೊರಡಿಸಿದ್ದ ಹಲವು ನೋಟಿಸ್‌ಗಳನ್ನು ಇತ್ತೀಚೆಗೆ ವಾಪಸ್ ಪಡೆಯಲಾಗಿದೆ. ಆದರೆ, ಇದು ಕೇವಲ ರಾಜ್ಯದ ಉಪ ಚುನಾವಣೆ, ಮಹಾರಾಷ್ಟ್ರ ಹಾಗೂ ಜಾರ್ಖಂಡ್ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟು ತೆಗೆದುಕೊಂಡಿರುವ ಕ್ರಮ ಎಂದು ಪಕ್ಷ ಆರೋಪಿಸಿದೆ.


# ನಗರದಲ್ಲಿ ಇಂದಿನಿಂದ ಪ್ರವಚನ



ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಇಂದಿನಿಂದ ಇದೇ ದಿನಾಂಕ 30 ವರೆಗೆ ಪ್ರತಿ ದಿನ ಸಂಜೆ 7 ಗಂಟೆಗೆ ಮುಂಡ ಗೋಡಿನ ಅತ್ತಿವೇರಿ ಶ್ರೀ ಬಸವೇಶ್ವರ ಮಾತಾಜಿ ಅವರಿಂದ ಪ್ರವಚನ ಕಾರ್ಯಕ್ರಮ ಏರ್ಪಡಿಸಲಾಗಿದೆ.
















KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas